www.divinegen.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ - 9 ಸಂಚಿಕೆ - 1 ಜನವರಿ 2013
Volume : IX Issue : I January 2013

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Devine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಹೊಸ ವರ್ಷದ ಸಂದೇಶ
2. ಪ್ರಕಟಣೆ
3. ಕೃಪೆಯ ಜೀವಿತ – ವಯಸ್ಕರ ಸ್ವರ
4. ಘನಪಡಿಸುವ ದೇವರು
5. ಆರೋಗ್ಯ ಸ್ವರ
6. ಅನಾಥರ ಸ್ವರ
7. ಪ್ರಶ್ನೋತ್ತರಗಳ ಸ್ವರ
8. ಪಾಟಿಂ ಗಾಂವಾಕ್
9. ಸ್ಥಳೀಯ ಮತ್ತು ವಿದೇಶ ಸುದ್ಧಿ
10. ಪ್ರಾರ್ಥನಾ ಸ್ವರ
11. ತಿಳುವಳಿಕೆಯ ಸ್ವರ
12. ಮಹಿಳೆಯರ ಸ್ವರ– ರೂತಳು
13. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸು ಕ್ರಿಸ್ತನ ನಾಮದಲ್ಲಿ ಪ್ರಿಯವಾಚಕರೆಲ್ಲರಿಗೂ ಹೊಸ ವರುಷದ ಹಾರ್ದಿಕ ಶುಭಾಶಯಗಳು.

ನಮ್ಮ ದೇವರು ಹಳೇಯದನ್ನು ನೀಗಿಸಿ ಹೊಸದ್ದನ್ನು ಅನುಗ್ರಹಿಸುವವನಾಗಿದ್ದಾನೆ. ನಾವೆಲ್ಲರೂ ಹಳೆಯ ವರುಷವನ್ನು ಮುಗಿಸಿ ಹೊಸ ವರ್ಷಕ್ಕೆ ಕಾಲಿಡುವಂತೆ ಕರ್ತನು ಕೃಪೆ ಕೊಟ್ಟಿದ್ದಾನೆ.

ಪ್ರಲಾ. 3:21–22 ಹೇಳುತ್ತದೆ, ನಾವು ಬದುಕಿ ಉಳಿದಿರುವುದು ಆತನ ಕೃಪೆಯೇ ಆತನ ಕೃಪಾವರಗಳು ಎಂದೂ ನಿಂತು ಹೋಗುವುದಿಲ್ಲ. ದಿನ ದಿನವೂ ಹೊಸತು ಹೊಸತಾಗಿ ಒದಗಿ ಬರುತ್ತದೆ ಎಂದು ಓದುತ್ತೇವೆ. ಆದಕಾರಣ ಕಳೆದ ವರುಷದ ಸೋಲುಗಳನ್ನು, ನೋವುಗಳನ್ನು ದು:ಖಗಳನ್ನು ಮರೆತು ಈ ಹೊಸ ವರುಷದ ಆರಂಭದಲ್ಲಿ ಕರ್ತನಿಗಾಗಿ ನಮ್ಮನ್ನು ಸಮರ್ಪಿಸೋಣ. ಯಾಕೆಂದರೆ ಕರ್ತನು ನಮ್ಮ ಜೀವಿತದಲ್ಲಿ ಹೊಸ ಕಾರ್ಯಗಳನ್ನು ಮಾಡಲು ಇಷ್ಟಪಡುತ್ತಾನೆ. ಯೇಸುಕ್ರಿಸ್ತನ ಬರೋಣವು ಹತ್ತಿರವಾಗಿದೆ. ಇನ್ನು ಭಾರತ ದೇಶದಲ್ಲಿ ಸುವಾರ್ತೆಯು ಸಾರಲ್ಪಡಬೇಕಾದ ಸ್ಥಳಗಳಿವೆ. ಹೊಸ ವರ್ಷದ ಆರಂಭದಲ್ಲಿ ಸುವಾರ್ತೆಯನ್ನು ಸಾರಲು, ದೇವರ ವಾಕ್ಯವನ್ನು ಹೇಳಲು, ಜನರನ್ನು ರಕ್ಷಣೆಗೆ ನಡೆಸಲು, ದೇವರಿಗೆ ಭಯಭಕ್ತಿಯುಳ್ಳ ಜೀವಿತವನ್ನು ಜೀವಿಸಲು ತೀರ್ಮಾನಗಳನ್ನು ಮಾಡೋಣ.

ದೇವರು ಹೇಳುತ್ತಾನೆ, **"ಯೆಹೋವನು ಹೀಗೆನ್ನುತ್ತಾನೆ – ಹಳೇ ಸಂಗತಿಗಳನ್ನು ಜ್ಞಾಪಕಕ್ಕೆ ತಂದುಕೊಳ್ಳಬೇಡಿರಿ, ಪುರಾತನಕಾರ್ಯಗಳನ್ನು ಮರೆತುಬಿಡಿ. ಇಗೋ, ಹೊಸ ಕಾರ್ಯವನ್ನು ಮಾಡುವೆನು"** (ಯೆಶಾ. 43:18–19). ದೇವರು ಹೊಸ ವರುಷದಲ್ಲಿ ನಿಮ್ಮನ್ನು ಆಶೀರ್ವದಿಸಿ ಎಲ್ಲಾ ವಿಧವಾದ ಅಭಿವೃದ್ಧಿಯನ್ನು ಕೊಟ್ಟು ಪ್ರತಿಯೊಂದು ಕ್ಷೇತ್ರದಲ್ಲಿ ಸಫಲತೆಯನ್ನು ಕೊಟ್ಟು ನಡೆಸಲಿ ಎಂದು ಹಾರೈಸುತ್ತೇವೆ.

ಕರ್ತನು ಚೀಯೋನಿನಿಂದ ಆಶೀರ್ವದಿಸಲಿ, ಆಮೆನ್.

*ಹಿರಿಯ ಸಂಪಾದಕ*

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**

# ಹೊಸ ವರ್ಷದ ಸಂದೇಶ

ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧ ನಾಮದಲ್ಲಿ ಪ್ರಿಯವಾಚಕ ಸಹೋದರ/ಸಹೋದರಿಯರೆಲ್ಲರಿಗೂ ವಂದನೆಗಳು ಹಾಗೂ ಹೊಸ ವರುಷದ ಶುಭಾಶಯಗಳು.

ಇಂದು ತಾವೆಲ್ಲರೂ ಸಂತೋಷವಾಗಿದ್ದೀರೆಂದು ನಾನು ನಂಬುತ್ತೇನೆ. ಹೊಸ ವರುಷದ ಧ್ಯಾನಕ್ಕಾಗಿ ಕೀರ್ತ. 103ರ ಕೆಲವು ಭಾಗಗಳನ್ನು ಧ್ಯಾನಿಸೋಣ. ಕೀರ್ತ. 103ರಲ್ಲಿ 22 ವಚನಗಳಿವೆ. ಈ ಕೀರ್ತನೆಯನ್ನು 7 ವಿಭಾಗವಾಗಿ ಧ್ಯಾನಿಸಬಹುದು.

**1) ಕೀರ್ತ. 103:1–2 ಕರ್ತನಿಗೆ ಉಪಕಾರಸ್ತುತಿಮಾಡುವದು.**

**2) ಕೀರ್ತ. 103:3–6 ಕರ್ತನಿಂದ ದೊರಕಿರುವ 7 ಆಶೀರ್ವಾದಗಳು.**

**3) ಕೀರ್ತ. 103:7 ನೇ ವಚನ ಕರ್ತನ ಮಾರ್ಗ ಹಾಗೂ ಕೃತ್ಯಗಳು.**

**4) ಕೀರ್ತ. 103:8–14 ವಾಕ್ಯ ಕರ್ತನ 12 ಗುಣಗಳು.**

**5) ಕೀರ್ತ. 103:15–16 ಮನುಷ್ಯನ ಆಯುಷ್ಯಕಾಲ.**

**6) ಕೀರ್ತ. 103:17–18 ಆತನಲ್ಲಿ ಭಯಭಕ್ತಿವುಳ್ಳವರಿಗೆ ಸಿಗುವ ಆಶೀರ್ವಾದ.**

**7) ಕೀರ್ತ. 103:19–22 ಕರ್ತನು ರಾಜಾಧಿರಾಜನು.**

**ನನ್ನ ಮನವೇ ಯೆಹೋವನನ್ನು ಕೊಂಡಾಡು; ನನ್ನ ಸರ್ವೇಂದ್ರಿಯಗಳೇ, ಆತನ ಪವಿತ್ರ ನಾಮವನ್ನು ಕೀರ್ತಿಸಿರಿ. ನನ್ನ ಮನವೇ, ಯೆಹೋವನನ್ನು ಕೊಂಡಾಡು : ಆತನ ಉಪಕಾರಗಳಲ್ಲಿ ಒಂದನ್ನೂ ಮರೆಯಬೇಡ** (ಕೀರ್ತ 103 : 1,2) ದಾವೀದನು ಈ ಎರಡು ವಾಕ್ಯದಲ್ಲಿ ನೋಡುವುದಾದರೆ ಕರ್ತನಿಗೆ ಉಪಕಾರಸ್ತುತಿ ಮಾಡುತ್ತಿದ್ದಾನೆ. ಆತನ ಮಕ್ಕಳಾದ ನಾವು ಕೂಡ ಆತನ ಉಪಕಾರಗಳಿಗೆ ಕೃತಜ್ಞತೆಯನ್ನು ಹೇಳಬೇಕು. ದಾವೀದನು 7 ಕಾರಣಗಳಿಗಾಗಿ ಕರ್ತನಿಗೆ ಉಪಕಾರಸ್ತುತಿ ಮಾಡುತ್ತಿದ್ದಾನೆ.

1) **1 ಸಮು. 16:1–13 ಕುರುಬನಾದಂತಹ ದಾವೀದನನ್ನು ಕರ್ತನು ಇಸ್ರಾಯೇಲರಿಗೆ ಅರಸನನ್ನಾಗಿ ಅಭಿಷೇಕ ಮಾಡುತ್ತಾನೆ.** ನಮ್ಮ ಜೀವಿತದಲ್ಲಿ ದೇವರು ಅನೇಕ ಅಭಿವೃದ್ಧಿಯನ್ನು ಕೊಡುತ್ತಾನೆ. ಆದರೆ ಕರ್ತನಿಗೆ ಉಪಕಾರ ಸ್ತುತಿಮಾಡುವುದನ್ನು ಮರೆತು ಹೋಗುತ್ತೇವೆ. ಅಮೇರಿಕ ದೇಶದ ಮಾಜಿ ಅಧ್ಯಕ್ಷರಾದ ಅಬ್ರಹಾಮ್ ಲಿಂಕನ್‌ರವರು ಯಾವಾಗಲೂ ದೇವರಿಗೆ ಸ್ತೋತ್ರ ಹೇಳುತ್ತಿದ್ದರು. ಕಾರಣ ಬಡತನದಲ್ಲಿ ಹುಟ್ಟಿ ಬೆಳೆದು ಅನೇಕ ಸಮಸ್ಯೆಗಳನ್ನು ಅವರು ಎದುರಿಸಿದರು. ಆದರೆ ದೇವರು ಒಂದು ದಿವಸ ಅವರನ್ನು ಅಮೇರಿಕ ದೇಶದ ಅಧ್ಯಕ್ಷರ ಕುರ್ಚಿಯಲ್ಲಿ ಕುಳಿತು ಕೊಳ್ಳುವಂತೆ ಮಾಡಿದನು. ಆದಕಾರಣ ನನ್ನ ಪ್ರಿಯರೇ, ನಮ್ಮ ಜೀವಿತದಲ್ಲಿ ಸಿರಿತನಗಳು, ಅಭಿವೃದ್ಧಿ, ಐಶ್ವರ್ಯ ಅಧಿಕಾರ ಜ್ಞಾನ ಇವೆಲ್ಲವುಗಳು ನಮ್ಮ ಜೀವಿತದಲ್ಲಿ ಬರುವಾಗ ನಾವು ದೇವರನ್ನು ಮರೆಯಬಾರದು. ಎಲ್ಲಾ ಸಮಯದಲ್ಲಿ, ಸಂದರ್ಭದಲ್ಲಿ ದೇವರನ್ನು ಸ್ತುತಿಸಬೇಕು.

2) **1 ಸಮು. 17:34–40 ದುಷ್ಟ ಮೃಗಗಳಿಂದಲೂ ದೇವರು ದಾವೀದನನ್ನು, ವೈರಿಗಳಾದ ಫಿಲಿಷ್ಟಿಯರಿಂದಲೂ ಅರಸನಾದ ಸೌಲನಿಂದಲೂ ಕಾಪಾಡಿದನು.** ನಮ್ಮ ದೇವರು ನಮ್ಮನ್ನು ವೈರಿಗಳಿಂದ ಕಾಪಾಡುವಾತನಾಗಿದ್ದಾನೆ. ನಮಗೆ ಯಾರು ವೈರಿಗಳಿಲ್ಲದಿದ್ದರೂ ನಮ್ಮ ಅಭಿವೃದ್ಧಿ ನಿಮಿತ್ತವಾಗಿ, ನಮ್ಮ ಆಶೀರ್ವಾದದ ನಿಮಿತ್ತವಾಗಿ ಅನೇಕರಿಗೆ ನಾವು ವೈರಿಗಳಾಗಿದ್ದೇವೆ. ಇದಕ್ಕೆ ಒಂದು ಒಂದು ಕಾರಣ ಹೊಟ್ಟೆಕಿಚ್ಚು ಅರಸನಾದ ಸೌಲನು ದಾವೀದನನ್ನು ದ್ವೇಷಿಸಲು ಒಂದೇ ಕಾರಣ ಹೊಟ್ಟೆಕಿಚ್ಚು. 1 ಸಮು. 18–6–16 ಹೊಟ್ಟೆಕಿಚ್ಚಿನ ನಿಮಿತ್ತವಾಗಿ ಅನೇಕ ಜನರು ನಮ್ಮ ವ್ಯಾಪಾರಕ್ಕೆ, ಕೆಲಸಗಳಿಗೆ ವಿರೋಧವಾಗಿ, ನಮ್ಮ ಕುಟುಂಬಕ್ಕೆ ವಿರೋಧವಾಗಿ, ನಮ್ಮ ಆರೋಗ್ಯಕ್ಕೆ ವಿರೋಧವಾಗಿ ನಿಂತು ತೊಂದರೆಗಳನ್ನು ಮಾಡಲು ನೋಡುತ್ತಾರೆ ಆದರೆ **"ಪರಾತ್ಪರನ ಮೊರೆಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು"**. (ಕೀರ್ತ. 91:1).

3) **1 ಪೂರ್ವ. 18:6–13, 2 ಸಮು. 5:10 ದಾವೀದನಿಗೆ ಎಲ್ಲಿ ಹೋದರೂ ಸಫಲತೆಯನ್ನು, ಜಯವನ್ನು ದೇವರು ಕೊಟ್ಟನು.** ಕಾರಣ ದಾವೀದನು ಕೀರ್ತ. 16:8 ವಾಕ್ಯದ ಪ್ರಕಾರ ತನ್ನ ಜೀವಿತದಲ್ಲಿ ಎಲ್ಲಾ ಕಾರ್ಯಗಳಲ್ಲಿ ಕರ್ತನನ್ನೇ ಮುಂದಿಟ್ಟನು ಮತ್ತು ಕರ್ತನು ಆತನ ಸಂಗಡ ಇದ್ದದರಿಂದ ಎಲ್ಲಿ ಹೋದರು ಸಫಲತೆ, ಜಯ ದೊರಕುತಿತ್ತು. ಪ್ರಿಯರೇ, ಅದೇ ರೀತಿಯಲ್ಲಿ ನಿಮ್ಮ ಜೀವಿತದಲ್ಲಿ ಎಲ್ಲಾ ಕಾರ್ಯಗಳಲ್ಲಿ ಕರ್ತನಿಗೆ ಪ್ರಥಮ ಆದ್ಯತೆಯನ್ನು ಕೊಡುವಾಗ, ಕರ್ತನ

ಅವರು ಹೆಚ್ಚು ಹೆಚ್ಚಾಗಿ ಬಲ ಹೊಂದಿ, ಚೀಯೋನ್ ಗಿರಿಯಲ್ಲಿ ದೇವರ ಸನ್ನಿಧಿಯನ್ನು ಸೇರುವರು (ಕೀರ್ತ. 84:7).

ಚಿತ್ತದ ಪ್ರಕಾರ ಜೀವಿಸುವಾಗ ಕರ್ತನು ನಿಮಗೆ ಕೂಡ ಸಫಲತೆ, ಜಯವನ್ನು ಅನುಗ್ರಹಿಸುತ್ತಾನೆ.

4) **ಪ್ರತಿಯೊಂದು ಪರಿಸ್ಥಿತಿಯಲ್ಲಿಯೂ ದೇವರು ದಾವೀದನಿಗೆ ಮಾರ್ಗದರ್ಶನ ಮಾಡಿದನು. 1 ಸಮು. 30:1–20, 2 ಸಮು. 12:1** ಕಾರಣ ದಾವೀದನು ದೇವರ ಸಮ್ಮುಖದಲ್ಲಿ ಸಮಯವನ್ನು ಕಳೆಯುತ್ತಿದ್ದನು. ಇದರ ನಿಮಿತ್ತವಾಗಿ ಕೀರ್ತ. 25:9–11, ಕೀರ್ತ. 32:8 ವಾಕ್ಯದ ಪ್ರಕಾರವಾಗಿ ಕರ್ತನು ತನ್ನ ಮಾರ್ಗವನ್ನು ದಾವೀದನಿಗೆ ತಿಳಿಸುತ್ತಿದ್ದನು. ಪ್ರಿಯರೇ, ಇಂದು **"ಇದರಿಂದ ಭಕ್ತರೆಲ್ಲರು ಸಕಾಲದಲ್ಲಿ ನಿನ್ನನ್ನು ಪ್ರಾರ್ಥಿಸಲಿ; ಮಹಾಪ್ರವಾಹವು ಅಂಥವರನ್ನು ಮುಟ್ಟುವದೇ ಇಲ್ಲ"** (ಕೀರ್ತ. 32:6). ಈ ವಾಕ್ಯವು ನಮ್ಮನ್ನು ಎಚ್ಚರಿಸುವಂಥದ್ದು. ಹೀಗೆ ನಾವು ಆತನ ಸಮ್ಮುಖದಲ್ಲಿ ಸಮಯವನ್ನು ಕಳೆಯುವಾಗ ನಮ್ಮನ್ನು ಆತನು ಮಾರ್ಗದರ್ಶಿಸುತ್ತಾನೆ.

5) **2 ಸಮು. 7:1 ವೈರಿಗಳ ಭಯ ತಪ್ಪಿಸಿ ದೇಶಕ್ಕೆ ಸಮಾಧಾನ ಕೊಟ್ಟನು.** ಭಯೋತ್ಪಾದನೆ, ಕೋಮುಕಲಭೆ, ಆತ್ಯಾಚಾರ, ಅಪಘಾತಗಳು, ಯುದ್ಧಗಳು ಎಲ್ಲಿ ನೋಡಿದರೂ ಸಮಾಧಾನವಿಲ್ಲ. ಆದರೆ ನಾವು ಪ್ರಾರ್ಥಿಸುವುದಾದರೆ **"ನನ್ನವರೆಂದು ಹೆಸರುಗೊಂಡ ನನ್ನ ಪ್ರಜೆಗಳು ತಮ್ಮನ್ನು ತಗ್ಗಿಸಿಕೊಂಡು ತಮ್ಮ ಕೆಟ್ಟ ನಡತೆಯನ್ನು ಬಿಟ್ಟು ತಿರುಗಿಕೊಂಡು ನನ್ನನ್ನು ಪ್ರಾರ್ಥಿಸಿ ನನ್ನ ದರ್ಶನವನ್ನು ಬಯಸುವದಾದರೆ ನಾನು ಪರಲೋಕದಿಂದ ಲಾಲಿಸಿ ಅವರ ಪಾಪಗಳನ್ನು ಕ್ಷಮಿಸಿ ಅವರ ದೇಶದಲ್ಲಿ ಆರೋಗ್ಯವನ್ನು ದಯಪಾಲಿಸುವೆನು. ಇನ್ನು ಮುಂದೆ ಈ ಸ್ಥಳದಲ್ಲಿ ಪ್ರಾರ್ಥಿಸುವವರನ್ನು ಕಟಾಕ್ಷಿಸಿ ಅವರ ವಿಜ್ಞಾಪನೆಗೆ ಕಿವಿಗೊಡುವೆನು"**. (2 ಪೂರ್ವ. 7:14–15). ಪ್ರಿಯರೇ, ನಾವು ತಗ್ಗಿಸಿಕೊಂಡು ದೇಶಕ್ಕಾಗಿ ಪ್ರಾರ್ಥಿಸುವಾಗ ದೇವರು ತನ್ನ ಕರುಣೆಯನ್ನು ತೋರಿಸುತ್ತಾನೆ. ದೇಶದಲ್ಲಿ ಸಮಾಧಾನ, ಸ್ವಸ್ಥತೆ ಉಂಟಾಗುತ್ತದೆ. ಇವತ್ತು ದೇವರ ಕಣ್ಣುಗಳು ಪೌಳಿಯ ಒಡಕಿನಲ್ಲಿ ನಿಲ್ಲುವವರನ್ನು ಎದುರುನೋಡುತ್ತಾನೆ. ಯಾವ ಪಟ್ಟಣದಲ್ಲಿರುತ್ತೇನೆ ಆ ಪಟ್ಟಣದ ಕ್ಷೇಮವೇ ನನ್ನ ಕ್ಷೇಮ ಅದಕ್ಕಾಗಿ ನಾವು ಪ್ರಾರ್ಥಿಸಬೇಕು. ದೇವರನ್ನು ದೃಷ್ಟಿಸುವ ಕಣ್ಣುಗಳು ಮಾತ್ರವೇ ದೇಶದಲ್ಲಿ ದೇವರು ನಡೆಸುವ ಕಾರ್ಯಗಳನ್ನು ನೋಡಲು ಸಾಧ್ಯ. ಕೋಟಿ ಜನರ ನಡುವೆ ನೀವು ಇದ್ದರೂ ಕೂಡಾ ನಿಮ್ಮ ಕಣ್ಣು ಮುಂದೆ ಎಡಗೈಗೂ ಬಲಗೈಗೂ ವ್ಯತ್ಯಾಸ ತಿಳಿಯದ ಜನರು ಅಳಿದು ಹೋಗುತ್ತಿರುವಾಗ ಅವರಿಗೋಸ್ಕರವಾಗಿ ನಿನ್ನ ಕಣ್ಣೀರು ಪರಲೋಕದಿಂದ ಉತ್ತರ ತರುವಂಥದ್ದಾಗಲಿ.

6) **2 ಸಮು. 7:27 ದಾವೀದನಿಗೆ ಮನೆಕಟ್ಟುವ ವಾಗ್ದಾನಕೊಟ್ಟನು ಮತ್ತು ಅದನ್ನು ನೆರವೇರಿಸಿದನು.** ಪ್ರಿಯರೇ, ದೇವರಿಗಾಗಿ ನಿಮಗೆ ನಿಜವಾದ ವೈರಾಗ್ಯವಿದ್ದರೆ, ಯಥಾರ್ಥತೆ ನಿಮ್ಮೊಳಗೆ ಇರುವುದಾದರೆ ದಾವೀದನು ದೇವರ ಮುಂದೆ ಮಾಡಿದ ಯೋಜನೆಯನ್ನು ದೇವರು ನೆರವೇರಿಸಿದ ಪ್ರಕಾರ ಕೀರ್ತ. 145:18–19 ವಾಕ್ಯದ ಪ್ರಕಾರ ಕರ್ತನಿಗಾಗಿ ನೀವು ಮಾಡಿದ ಯೋಜನೆಯನ್ನು ಕರ್ತನು ನೆರವೇರಿಸಲು ಶಕ್ತನಾಗಿದ್ದಾನೆ.

7) **"ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ ನೀನು ಹತ್ತಿರವಿರುವದರಿಂದ ಕೇಡಿಗೆ ಹೆದರೆನು; ನಿನ್ನ ದೊಣ್ಣೆಯೂ ನಿನ್ನ ಕೋಲೂ ನನಗೆ ಧೈರ್ಯ ಕೊಡುತ್ತವೆ"** (ಕೀರ್ತ. 23:4). ದೇವರು ದಾವೀದನ ಜೀವಿತದಲ್ಲಿ ಎಲ್ಲಾ ಸಮಯದಲ್ಲಿಯೂ ಇದ್ದನು. ಭಕ್ತನಾದ ದಾವೀದನು ದೇವರನ್ನೇ ಆತುಕೊಂಡು ಜೀವಿಸಿದ ನಿಮಿತ್ತವಾಗಿ ಕರ್ತನು ಎಲ್ಲಾ ಸಮಯದಲ್ಲಿ ಆತನೊಂದಿಗಿದ್ದನು. ಪ್ರಿಯರೇ, ನೀವು ಕೂಡಾ ಕರ್ತನನ್ನೇ ಆತುಕೊಂಡು ಜೀವಿಸುವಾಗ ಕರ್ತನು ನಿಮ್ಮ ಜೊತೆಯಲ್ಲಿರುತ್ತಾನೆ. ಒಬ್ಬ ಭಕ್ತನಿಗೆ ದೇವರು ಆತನ ಸಂಗಡ ಇರುವುದೇ ದೊಡ್ಡ ಆಶೀರ್ವಾದ. ಯಾರು ಕರ್ತನಾದ ಯೇಸುಕ್ರಿಸ್ತನಲ್ಲಿ ಜೀವಿಸುತ್ತಾರೋ, ಲೋಕವು ಕೂಡಾ ಅವರನ್ನು ತಿಳಿಯುತ್ತದೆ. ಇದಕ್ಕಿಂತ ಬೇರೆ ಆಶೀರ್ವಾದ ಇಲ್ಲ. ಕರ್ತನಾದ ಯೇಸುಕ್ರಿಸ್ತನು ನಿಮ್ಮೊಂದಿಗಿರುವಾಗ ಪರಲೋಕದ ಎಲ್ಲಾ ಆಶೀರ್ವಾದಗಳಿಗೆ ನೀವು ಬಾಧ್ಯರಾಗಿದ್ದೀರಿ. ಪ್ರಿಯರೇ, ದಾವೀದನನ್ನು ಯಾವ ರೀತಿಯಲ್ಲಿ ಕರ್ತನು ಆಶೀರ್ವದಿಸಿದನು ಅದೇ ರೀತಿಯಲ್ಲಿ ಈ ಹೊಸ ವರುಷದಲ್ಲಿ ಒಳ್ಳೆಯ ತೀರ್ಮಾನದೊಂದಿಗೆ ನೀವು ಪ್ರಾರಂಭಿಸುವುದಾದರೆ ಕರ್ತನು ನಿಮ್ಮನ್ನು ಆಶೀರ್ವಾದಿಸಲು ಶಕ್ತನಾಗಿದ್ದಾನೆ.

**"ಯೇಸುಕ್ರಿಸ್ತನು ನಿನ್ನೆ ಇದ್ದ ಹಾಗೆ ಈಹೊತ್ತೂ ಇದ್ದಾನೆ, ನಿರಂತರವೂ ಹಾಗೆಯೇ ಇರುವನು"** (ಇಬ್ರಿ. 13:8).

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

ಯೆಹೋವನೇ, ನಿನ್ನ ವಾಕ್ಯವು ಪರಲೋಕದಲ್ಲಿ ಶಾಶ್ವತವಾಗಿ ಸ್ಥಾಪಿಸಲ್ಪಟ್ಟಿದೆ (ಕೀರ್ತ. 119:89).

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಎಫೆಸ ಸಭೆಯು ಆತ್ಮೀಕವಾಗಿ ಒಳ್ಳೆ ಬೆಳೆದಂಥ ಸಭೆಯಾಗಿತು. ಕರ್ತನ ಅದ್ಭುತಗಳನ್ನು ರುಚಿಸಿ ನೋಡಿತು. ಆತ್ಮದಲ್ಲಿ ತುಂಬಲ್ಪಟ್ಟ ಅನುಭವ ಎಲ್ಲಾ ಇದ್ದರೂ ಸಹ ಕೆಲವು ವರ್ಷಗಳ ನಂತರ ಕರ್ತನು ಆ ಸಭೆಯ ಮೇಲೆ ಮೊದಲ ಪ್ರೀತಿಯಲ್ಲಿ ಬಿದ್ದು ಹೋಗಿದ್ದರ ಕುರಿತು ತಪ್ಪುಹೊರಿಸುವುದನ್ನು ನೋಡುತ್ತೇವೆ. ಇದೊಂದು ನಮಗೆ ಎಚ್ಚರಿಕೆಯಾಗಿದೆ. ಸತ್ಯವೇದದಲ್ಲಿ ಬರೆಯಲ್ಪಟ್ಟ ಪ್ರತಿಯೊಂದು ವಿಷಯವೂ ನಡೆದ ಘಟನೆಗಳು ನಮಗೆ ಎಚ್ಚರಿಕೆಗಾಗಿಯೂ ನಿದರ್ಶನ ರೂಪಗಳಿಗಾಗಿಯೂ ಇದೆ. **1 ಕೊರಿ. 10:11 ಅವರಿಗೆ ಸಂಭವಿಸಿದ ಈ ಸಂಗತಿಗಳು ನಿದರ್ಶನ ರೂಪವಾಗಿವೆ. ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿ ಬರೆದವೆ. "ಪೂರ್ವದಲ್ಲಿ ಬರೆದದ್ದೆಲ್ಲಾ ನಮ್ಮನ್ನು ಉಪದೇಶಿಸುವದಕ್ಕಾಗಿ ಬರೆಯಲ್ಪಟ್ಟಿತು. ನಾವು ಓದಿ ಸ್ಥಿರಚಿತ್ತವನ್ನೂ ಆದರಣೆಯನ್ನೂ ಹೊಂದಿ ರಕ್ಷಣೆಯ ನಿರೀಕ್ಷೆಯುಳ್ಳವರಾಗಿರುವಂತೆ ಆ ಗ್ರಂಥಗಳು ಬರೆಯಲ್ಪಟ್ಟವು"** (ರೋಮ. 15:4). ಮದುವೆಯಾದ ಆರಂಭದಲ್ಲಿ ಗಂಡ ಹೆಂಡತಿರ ಮಧ್ಯದಲ್ಲಿ ಎಂಥ ಪ್ರೀತಿ ಅಂದರೆ ಅದನ್ನು ವರ್ಣಿಸುವುದು ಅಸಾಧ್ಯ. ಮದುವೆಯಾದ ಮೊದಲ ವರ್ಷ ಗಂಡ ಮಾತನಾಡುತ್ತಾನೆ ಹೆಂಡತಿ ಕೇಳುತ್ತಾಳೆ. 2ನೇ ವರ್ಷ ಹೆಂಡತಿ ಮಾತನಾಡುತ್ತಾಳೆ ಗಂಡು ಕೇಳುತ್ತಾನೆ. 3ನೇ ವರ್ಷ ಇಬ್ಬರೂ ಮಾತನಾಡುತ್ತಾರೆ ನೆರೆಕೆರೆಯವರು ಕೇಳುತ್ತಾರೆ. ಯೆರೆ. 2:2 ರಲ್ಲಿ ಕರ್ತನು ಹೀಗನ್ನುತ್ತಾನೆ, ನೀನು ಹೋಗಿ ಯೆರೂಸಲೇಮಿನ ಕಿವಿಗೆ ಮುಟ್ಟುವಂತೆ ಈ ಮಾತುಗಳನ್ನು ಸಾರು ಯೆಹೋವನು ಹೀಗನ್ನುತ್ತಾನೆ ನೀನು ಯೌವನದಲ್ಲಿ (ನನ್ನ ಮೇಲೆ) ಇಟ್ಟಿದ್ದ ಪ್ರೀತಿಯನ್ನೂ ವಿವಾಹಕಾಲದ ನಿನ್ನ ಪ್ರೇಮವನ್ನೂ ಬೀಜ ಬತ್ತಿಯೇ ಇಲ್ಲದ ಅರಣ್ಯದಲ್ಲಿ ನೀನು ನನ್ನನ್ನು ಹಿಂಬಾಲಿಸಿದ ನಿನ್ನ ಪಾತಿವ್ರತ್ಯವನ್ನೂ ನಿನ್ನ ಹಿತಕ್ಕಾಗಿ ಜ್ಞಾಪಕದಲ್ಲಿಟ್ಟಿದ್ದೇನೆ. ಈ ಸಭೆಯು ಕಷ್ಟದಿಂದ ಸುವಾರ್ತ ಸೇವೆಯನ್ನು ಮಾಡಿದರೂ ನಿಜವಾದ ಪ್ರೀತಿ ಇರಲಿಲ್ಲ. ಅನೇಕ ಕಡೆಗಳಲ್ಲಿ ವಿಶ್ವಾಸಿಗಳ ಕೂಟ, ಸಭಾಪಾಲಕರ ಕೂಟ ಎಂದು ಕೇಳುತ್ತೇವೆ. ಒಬ್ಬ ವಿಶ್ವಾಸಿಗೆ ತೊಂದರೆಯಾದರೆ ಇನ್ನೊಬ್ಬ ವಿಶ್ವಾಸಿ ನಗುತ್ತಾನೆ. ಒಬ್ಬ ಸಭಾಪಾಲಕರಿಗೆ ತೊಂದರೆಯಾದರೆ ಇನ್ನೊಬ್ಬ ಸಭಾಪಾಲಕರು ನಗುತ್ತಾರೆ. ಪ್ರೀತಿ ಐಕ್ಯತೆ ಎಂಬುವಂತದ್ದು ಕೇವಲ ವೇದಿಕೆಯಲ್ಲಿನ ಪ್ರಸಂಗದ ಮಾತು ಹಾಗೂ ಬಾಯಿಮಾತುಗಳಾಗಿ ಮಾತ್ರ ಬಿಟ್ಟಿವೆ. ನಾವು ಏನು ಮಾಡುತ್ತಾ ಇದ್ದೇವೆ ಎಂಬುದಕ್ಕಿಂತ ಏತಕ್ಕಾಗಿ ಮಾಡುತ್ತಿದ್ದೇವೆ ಎಂಬುದು ಮುಖ್ಯವಾಗಿದೆ.

ನಾವು 2 ಕೊರಿ. 11:3ರಲ್ಲಿ **ಆದರೆ ಹೇಗೆ ಹವ್ವಳು ಸರ್ಪದ ಕುಯುಕ್ತಿಗೆ ಒಳಬಿದ್ದು ಮೋಸಹೋದಳೋ ಹಾಗೆಯೇ ನಿಮ್ಮ ಮನಸ್ಸು ಕ್ರಿಸ್ತನ ವಿಷಯದಲ್ಲಿರಬೇಕಾದ ಯಥಾರ್ಥತ್ವವನ್ನೂ ಪಾತಿವ್ರತ್ಯವನ್ನೂ ಬಿಟ್ಟು ಕೆಟ್ಟು ಹೋದೀತೆಂದು ನನಗೆ ಭಯವುಂಟು.** ಈ ಮಾತುಗಳನ್ನು ಎಫೆಸ ಸಭೆಯವರು ಗಮನಿಸಲಿಲ್ಲ. ಅನೇಕ ಕಾರ್ಯಗಳನ್ನು ನಾವು ಮಾಡಬಹುದು ಆದರೆ ಇವೆಲ್ಲವೂ ಕರ್ತನ ಪ್ರೀತಿ ಇಲ್ಲದೆ ಮಾಡಿದರೆ ಏನು ಪ್ರಯೋಜನ. **"ಕರ್ತನನ್ನು ಪ್ರೀತಿಸದವನು ಶಾಪಗ್ರಸ್ಥನು"** (1 ಕೊರಿ. 16:22). **"ಇದಲ್ಲದೆ ಅಧರ್ಮವು ಹೆಚ್ಚಾಗುವುದರಿಂದ ಬಹು ಜನರ ಪ್ರೀತಿಯು ತಣ್ಣಗಾಗಿ ಹೋಗುವುದು"** (ಮತ್ತಾ. 24:12).

2) ಪ್ರಕ. 2:5 Steps On The Return Journy ದೇವರ ವಾಕ್ಯಕ್ಕೆ ವಿಧೇಯರಾದವರು ಈ ಮೂರು ವಿಷಯಗಳನ್ನು ಕೈಗೊಂಡರೆ ಮೊದಲ ಪ್ರೀತಿಗೆ ತಿರುಗಬಹುದು.

ಎಲ್ಲಿಂದ ಬಿದ್ದಿಯಾ ಎಂದು ನೆನಪಿಸಬೇಕು (Remember) ನಾವು ಮಾಡಿದ ಪಾಪವನ್ನು ನೆನಸಿ ಪಶ್ಚಾತ್ತಾಪಪಟ್ಟು ಅರಿಕೆ ಮಾಡಿ ಬಿಡಬೇಕು. ನಾವು ಬೀಳುವುದಕ್ಕೆ ಯಾವುದಾದರೊಂದು ಕಾರಣ ಇರುತ್ತದೆ. ಆತ್ಮೀಕ ಹಿಂಜಾರುವಿಕೆ ಒಮ್ಮೇಲೆ ಬರುವುದಿಲ್ಲಾ ಅದು ಹಂತ ಹಂತವಾಗಿ ಬರುತ್ತದೆ. ಹೀಗೆ ಒಂದು ಮರ ಒಳಗಡೆ ಗೆದ್ದಲು ತಿಂದಿದ್ದರೂ ಹೊರಗಡೆ ಸವಿವರವಾಗಿ ಕಾಣುತ್ತದೆ. ಜೋರಾಗಿ ಗಾಳಿ ಬೀಸುವಾಗ ಅದು ಬಿದ್ದು ಹೋಗುತ್ತದೆ. ದೇವರ ವಾಕ್ಯ ಹೇಳುತ್ತದೆ, ಎಫೆಸ. 4:27 ಸೈತಾನನಿಗೆ ಅವಕಾಶ ಕೊಡಬೇಡಿರಿ. 2 ಕೊರಿ. 2:11 ಸೈತಾನನ ತಂತ್ರಗಳನ್ನು ಅರಿಯದವರಲ್ಲವಲ್ಲಾ ಅವನು ನಮ್ಮನ್ನು ವಂಚಿಸಿ ನಷ್ಟಪಡಿಸಬಾರದು. ಲೂಕ. 15:11 ರಲ್ಲಿ ಸುಂದರವಾದ ಘಟನೆಯ ಬಗ್ಗೆ ವಿವರಿಸಲ್ಪಟ್ಟಿದೆ. ತಪ್ಪಿ ಹೋದ ಮಗನು

ಸುನಿರೀಕ್ಷೆಯುಂಟಾದ ಸೆರೆಯವರೇ ನಿಮ್ಮ ದುರ್ಗಕ್ಕೆ ಹಿಂದಿರುಗಿರಿ;
ನಿಮಗೆ ಎರಡರಷ್ಟು (ಸುಖವನ್ನು) ದಯಪಾಲಿಸುವೆನು (ಜೆಕ. 9:12).

ಎಲ್ಲವನ್ನು ನಷ್ಟಪಡಿಸಿಕೊಂಡ ನಂತರ ತನ್ನ ತಂದೆಯ ನೆನಪು ಬಂದು ಲೂಕ. 15:17–18 ಆಗ ಅವನಿಗೆ ಬುದ್ಧಿ ಒಂದು ಅವನು ನನ್ನ ತಂದೆಯ ಬಳಿಯಲ್ಲಿ ಎಷ್ಟೋ ಮಂದಿ ಕೂಲಿಯಾಳುಗಳಿಗೆ ಬೇಕಾದಷ್ಟು ಆಹಾರವಿದೆ. ನಾನಾದರೋ ಇಲ್ಲಿ ಹಸಿವಿನಿಂದ ಸಾಯುತ್ತೇನೆ ನಾನು ಎದ್ದು ನನ್ನ ತಂದೆಯ ಬಳಿಗೆ ಹೋಗಿ ಅವನಿಗೆ ಅಪ್ಪ ಪರಲೋಕಕ್ಕೆ ವಿರೋಧವಾಗಿಯೂ ನಿನ್ನ ಮುಂದೆಯೂ ಪಾಪ ಮಾಡಿದ್ದೇನೆ. ಇನ್ನು ನಾನು ನಿನ್ನ ಮಗನೆನಿಸಿಕೊಳ್ಳುವುದಕ್ಕೆ ಯೋಗ್ಯನಲ್ಲ. ದಾವೀದನನ್ನು ಬೀಳಿಸಿದ ಕಣ್ಣಿನಾಶೆಯ ಪಾಪ, ಅದರ ನಂತರ ಮೋಹ, ಕಾಮ, ವ್ಯಭಿಚಾರ, ಕೊಲೆ, ಅನೇಕ ಪಾಪಗಳನ್ನು ಮಾಡಬೇಕಾಯಿತು. 2 ಸಮು. 11:1 ನಾತನ ಪ್ರವಾದಿಯು ಬಂದು ಎಚ್ಚರಿಸಿದಾಗ 2 ಸಮು. 12:13 ನಾನು ದೇವರಿಗೆ ವಿರೋಧವಾಗಿ ಪಾಪ ಮಾಡಿದ್ದೇನೆಂದು ತನ್ನ ತಪ್ಪನ್ನು ಪಶ್ಚಾತ್ತಾಪದಿಂದ ಅರಿಕೆಮಾಡುವುದನ್ನು ನೋಡುತ್ತೇವೆ. ನನ್ನ ಪ್ರಿಯ ಸಹೋದರನೇ, ಸಹೋದರಿಯೇ ಇಂದು ನೀನು ಕೂಡಾ ಆತ್ಮೀಕ ಜೀವಿತದಲ್ಲಿ ಬಿದ್ದು ಹೋದ ಸ್ಥಿತಿಯಲ್ಲಿರಬಹುದು. ಕಾಮ, ಮೋಹ, ಕುರುಡು ಪ್ರೀತಿ, ಹಣದಾಸೆ, ಶರೀರದಾಸೆ, ಹೀಗೆ ಯಾವುದೇ ಒಂದು ಸಂಗತಿಯಲ್ಲಿ ಬಿದ್ದು ನಿಮ್ಮ ಆತ್ಮೀಕ ಜೀವಿತ ನಷ್ಟವಾಗಿರಬಹುದು, ಮುಂಚಿನ ಪ್ರಾರ್ಥನಾ ಜೀವಿತ, ಮುಂಚಿನ ಅಭಿಷೇಕ, ಮುಂಚಿನ ಪರಿಶುದ್ಧತೆ, ಮುಂಚಿನ ಸೇವೆಗೆ ಬರಲು ಆಸೆಪಡುತ್ತಿರಬಹುದು ಖಂಡಿತ ನಿಮಗೆ ಅವಕಾಶ ಇದೆ. ಸೈತಾನನು ನಿಮ್ಮ ಕಿವಿಯಲ್ಲಿ ನೀನು ಇನ್ನು ಏಳಲು ಸಾಧ್ಯವಿಲ್ಲ, ನಿನಗೆ ಇನ್ನು ಭವಿಷ್ಯವಿಲ್ಲ, ನೀನು ಪ್ರಯೋಜನವಿಲ್ಲದವನು ಎಂಬುದೆಲ್ಲಾ ಹೇಳಬಹುದು. ಅವನ ಸುಳ್ಳನ್ನು ನಂಬಬೇಡಿರಿ, ಜನರ ದೂಷಣೆಗೂ ಕಿವಿಗೊಡಬೇಡಿರಿ, ಏಕಾಂತವಾಗಿ ಕರ್ತನ ಸಮ್ಮುಖಕ್ಕೆ ಬಂದು ಮೊಣಕಾಲೂರಿ ದೇವರನ್ನು ನೋಡಿ ಅಳಿರಿ. **"ನಿನ್ನ ಜನರು ಕರ್ತನಿಗೆ ಮನ:ಪೂರ್ವಕವಾಗಿ ಮೊರೆಯಿಟ್ಟಿದ್ದಾರೆ; ಚೀಯೋನ್‌ನಗರಿಯ ಕೋಟೆಯವರೇ, ನಿಮ್ಮ ಕಣ್ಣೀರು ಹಗಲಿರುಳೂ ತೊರೆಯಂತೆ ಹರಿಯಲಿ, ನಿಮಗೆ ವಿರಾಮವೇ ಬೇಡ, ಅದು ನಿಮ್ಮ ನೇತ್ರದಿಂದ ನಿಲ್ಲದೆ ಸುರಿಯಲಿ; ರಾತ್ರಿಯ ಒಂದೊಂದು ಜಾವದ ಆರಂಭದಲ್ಲಿ ಎದ್ದೆದ್ದು ಗೋಳಾಡಿರಿ, ನಿಮ್ಮ ಹೃದಯ ಸಾರವನ್ನು ನೀರನ್ನೋ ಎಂಬಂತೆ ಕರ್ತನ ಸಮ್ಮುಖದಲ್ಲಿ ಹೊಯ್ದುಬಿಡಿರಿ; ಪ್ರತಿಯೊಂದು ಬೀದಿಯ ಕೊನೆಕೊನೆಯಲ್ಲಿ ಹಸಿವೆಯಿಂದ ಮೂರ್ಛೆಹೋಗಿರುವ ನಿಮ್ಮ ಮಕ್ಕಳ ಪ್ರಾಣವನ್ನು ಉಳಿಸಬೇಕೆಂದು ಕೈಯೆತ್ತಿ ಪ್ರಾರ್ಥಿಸಿರಿ"** (ಪ್ರಲಾ. 2:18–19).

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

---

# ಕವನಗಳು

ಜೀವನದಲ್ಲಿ ಸಂಕಷ್ಟದ ದಿನಗಳು
ಬರುತ್ತಿವೆ ಪುನ: ಪುನ:
ಆದಾಗ್ಯೂ ಸುಖದ ಸಂವತ್ಸರಗಳು
ಕಾದಿದೆ ದೊಡ್ಡ ನದಿಯ ತರಹ.

ಪ್ರಿಯನೇ ದಿನದಿನವೂ ನಿನ್ನ ಜೊತೆಯಲಿ
ನೆನೆಯುವೆ ನಿನ್ನ ಪ್ರೀತಿಯ ಮಳೆಯಲಿ
ಮುಳುಗಿಸಿದೆ ನಿನ್ನ ಹರ್ಷದ ಹೊನಲಲಿ
ಪ್ರಜ್ವಲಿಸಿದೆ ನಿನ್ನ ಸ್ನೇಹ ಸದಾ ನನ್ನಲಿ

ನನ್ನ ಮೇಲಿಳಿಯಲಿ ನಿನ್ನ ಅಭಿಷೇಕದ ತೈಲ
ಸದಾ ಹರಿಯಲಿ ನಿನ್ನ ಜೀವಜಲ
ಇದು ನಮ್ಮ ಪರಾಕ್ರಮದಿಂದಲ್ಲ
ಆದರೆ ಇದು ನಿನ್ನ ಕೃಪೆ ಮತ್ತು ಬಲ

ಯೇಸುವೇ ನೀನೇ ನನ್ನ ದೊಡ್ಡ ಬಯಕೆ
ನಿನ್ನೊಂದಿಗಿರುವುದೇ ನನ್ನ ಕೋರಿಕೆ
ನೀ ಅನುಗ್ರಹಿಸು ಮಹಿಮೆಯ ಹೊದಿಕೆ
ಎಂದಿಗೂ ಹುಸಿಯಾಗದು ನನ್ನ ನಂಬಿಕೆ.

**– ಸಹೋ। ದೀಪ್ತಿ ಮಂಗಳ**

ಅವರು ಹೆಚ್ಚು ಹೆಚ್ಚಾಗಿ ಬಲ ಹೊಂದಿ, ಚೀಯೋನ್ ಗಿರಿಯಲ್ಲಿ ದೇವರ ಸನ್ನಿಧಿಯನ್ನು ಸೇರುವರು (ಕೀರ್ತ. 84:7).

# ಕೃಪೆಯ ಜೀವಿತ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಪ್ರಿಯ ದೇವ ಸೇವಕರೇ, ನಿಮ್ಮ ಸಭೆಯಲ್ಲಿ ಮುಂಜಾನೆ ಪ್ರಾರ್ಥನೆಯನ್ನು ಪ್ರಾರಂಭಿಸಿ ದೇವರ ಕೃಪೆಯನ್ನು ಹೊಂದಿ ಉಜ್ಜೀವನ ಬಿಡುಗಡೆ ಹೊಂದಿಕೊಳ್ಳಿರಿ. ಕೊರಿಯ ದೇಶದಲ್ಲಿ ಅತೀ ದೊಡ್ಡ ಉಜ್ಜೀವನ ಎಂದು ನಾವು ಕೇಳುತ್ತೇವೆ. ಅದಕ್ಕೆ ಕಾರಣ ಮುಂಜಾನೆ ಪ್ರಾರ್ಥನೆಯ ಕೃಪೆ ಸುರಿಯಲ್ಪಡುವುದೇ ಆಗಿದೆ. ಇದನ್ನು ಬರೆಯುತ್ತಿರುವ ನಾನೂ ಕೂಡಾ ನಮ್ಮ ಸಭೆಯಲ್ಲಿ ಮುಂಜಾನೆ ಪ್ರಾರ್ಥನೆಯಿಂದ ಬಹಳಷ್ಟು ಹೊಂದಿದ ದೇವರ ಕೃಪೆಯ ಮೂಲಕ, ಉಜ್ಜೀವನ, ಬಿಡುಗಡೆ ಜಯವನ್ನು ಹೊಂದುತ್ತಾ ಇದ್ದೇವೆ. ದೇವರ ಪರಿಶುದ್ಧ ನಾಮಕ್ಕೆ ಸ್ತೋತ್ರವಾಗಲಿ. **"ಹೊಸ ಕೃಪೆಯ ನೀಡು ದೇವಾ, ಹೊಸ ಬಲವ ನೀಡು ದೇವಾ"**.

ವಯಸ್ಕರ ಸ್ವರ

4) ನಮ್ಮ ಬಲಹೀನತೆಯಲ್ಲಿ ಸಿಗುವ ದೇವರ ಕೃಪೆ (2 ಕೊರಿ. 12:9). ಪೌಲನು ತನ್ನನ್ನು ಶೂಲದಂತೆ ನಾಟಿದ ಪೀಡೆಯ ಕುರಿತಾಗಿ ಮೂರು ಸಾರಿ ಅದು ತನ್ನನ್ನು ಬಿಟ್ಟು ಹೋಗಲೆಂದು ಕರ್ತನಲ್ಲಿ ಪ್ರಾರ್ಥಿಸಿದರೂ ನನ್ನ ಕೃಪೆಯೇ ನಿನಗೆ ಸಾಕು ಬಲಹೀನತೆಯಲ್ಲಿಯೇ ಬಲವು ಪೂರ್ಣಸಾಧಕವಾಗುತ್ತದೆ. ಎಂದು ಹೇಳುವ ವಿಷಯದಲ್ಲಿ ಪ್ರಸ್ತವಿಸುತ್ತಾನೆ. **"ಕ್ರಿಸ್ತನ ನಿಮಿತ್ತ ನನಗೆ ನಿರ್ಬಲಾವಸ್ಥೆಯೂ ತಿರಸ್ಕಾರವೂ ಕೊರತೆಯೂ ಹಿಂಸೆಯೂ ಇಕ್ಕಟ್ಟೂ ಸಂಭವಿಸಿದಾಗ ಸಂತುಷ್ಟನಾಗಿದ್ದೇನೆ. ನಾನು ಯಾವಾಗ ನಿರ್ಬಲನಾಗಿದ್ದೇನೋ ಆವಾಗಲೇ ಬಲವುಳ್ಳವನಾಗಿದ್ದೇನೆ"** (2 ಕೊರಿ. 12:9–10). ಪ್ರಿಯ ದೇವ ಮಗುವೆ ನಾವು ನಮ್ಮ ಬಲವನ್ನು ತೋರ್ಪಡಿಸುವಾಗ ದೇವರ ಬಲವನ್ನು, ಕೃಪೆಯನ್ನು ಹೊಂದಲು ಅಸಾಧ್ಯ. ಆದರೆ ನಾವು ಬಲಹೀನರಾಗಿ ದೇವರ ಬಲವನ್ನು ಎದುರುನೋಡುವಾಗಲೇ ಎಲ್ಲಾ ಸಾಧ್ಯ. ಹೌದು ಆತನಿಗೆ ಕುದುರೆಯ ಶಕ್ತಿಯಲ್ಲಿ ಇಷ್ಟವಿಲ್ಲ ಹಾಗೂ ಆಳಿನ ತೊಡೆಯ ಬಲವನ್ನು ಮೆಚ್ಚುವುದಿಲ್ಲ. ಆದರೆ ಆತನು ಆನಂದಿಸುವುದು ತನ್ನ ಕೃಪೆಯನ್ನು ನಿರೀಕ್ಷಿಸುವ ಭಕ್ತರಲ್ಲೇ (ಕೀರ್ತ. 147:10–11). ಸಂಸೋನನ ಮುಂದೆ ಒಂದು ಪ್ರಾಯದ ಸಿಂಹವು ಗರ್ಜಿಸುತ್ತಾ ಅವನೆದುರಿಗೆ ಬಂದಿತು. ಆದರೆ ಸತ್ಯವೇದ ಹೇಳುತ್ತದೆ, ಅವನ ಕೈಯಲ್ಲಿ ಏನೂ ಇಲ್ಲದಿದ್ದರೂ ಯೆಹೋವನ ಆತ್ಮನು ಅವನ ಮೇಲೆ ಫಕ್ಕನೆ ಬಂದದರಿಂದ ಆ ಸಿಂಹವನ್ನು ಹೋತದ ಮರಿಯನ್ನೋ ಎಂಬಂತೆ ಸೀಳಿಬಿಟ್ಟನು (ನ್ಯಾಯ. 14:5–6). ಬರಿದಾಗಿ, ಏನೂ ಇಲ್ಲದ ಸಮಯದಲ್ಲಿ ಬಲಹೀನನಾಗಿರುವಾಗಲೇ ಸಿಗುವುದು, ದೇವರ ಕೃಪೆ ನಮ್ಮನ್ನು ಬಲವಂತರಾಗಿ ಮಾಡುವುದು. ಬಹಳಷ್ಟು ಸಲ ಸೇವೆಯಲ್ಲಿ ಬಂದ ಹೋರಾಟದ ನಿಮಿತ್ತವಾಗಿ ನಾನು ಸೋತು ಕುಗ್ಗಿದವನಾಗಿರುವಾಗಲೆಲ್ಲಾ ದೇವರು ತನ್ನ ಕೃಪೆಯಿಂದ ನನ್ನನ್ನು ಬಲಪಡಿಸಿದ ಉದಾಹರಣೆಗಳು ಸಾಕಷ್ಟು ಇವೆ. ಪ್ರಿಯರೇ, ಹಲ್ಲೆಲೂಯ! ಕೃಪಾಪೂರ್ಣನಾದ ದೇವರು ತಾನೇ ನೀವು ಸ್ವಲ್ಪಕಾಲ ಬಾಧೆಪಟ್ಟ ಮೇಲೆ ಯೋಗ್ಯಸ್ಥಿತಿಗೆ ತಂದು ನೆಲೆಗೊಳಿಸಿ ಬಲಪಡಿಸುವನು (1 ಪೇತ್ರ. 5:10). ನಾವು ಬಲಹೀನರು ಹೌದು ಆದರೆ ನಮ್ಮೊಳಗಿರುವ ಶಕ್ತನಾದ ಕರ್ತನು ಎಂದಿಗೂ ಬಲಹೀನನಲ್ಲ. ದಾವೀದನು ಬರೆಯುತ್ತಾನೆ. **"ನಿನ್ನ ಬಲದಿಂದ ದಂಡಿನ ಮೇಲೆ ಬೀಳುವೆನು; ನನ್ನ ದೇವರ ಸಹಾಯದಿಂದ ಪ್ರಾಕಾರವನ್ನು ಹಾರುವೆನು"** (ಕೀರ್ತ. 18:29). **"ನನ್ನ ಬಲವಾಗಿರುವ ಯೆಹೋವನೇ, ನಿನ್ನಲ್ಲಿಯೇ ಮಮತೆಯಿಡುತ್ತೇನೆ"** (ಕೀರ್ತ. 18:1). ಅಪೋಸ್ತಲನಾದ ಪೌಲನು ಬರೆಯುವ ಒಂದು ಮಾತು ನನ್ನ ಬಲಹೀನ ಸಮಯದಲ್ಲಿ ನನಗೆ ಬಹಳ ಬಲತಂದು ಕೊಟ್ಟಿರುತ್ತದೆ. "ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ (ಫಿಲಿ. 4:13). ಅನೇಕ ವೇಳೆ ನಾನು ಆರಾಧನೆಗಾಗಿ ಸಿದ್ಧವಾಗಿ ಬರುವಾಗ ತುಂಬಾ ಬಲಹೀನರಾಗಿ ಈ ದಿನದ ಆರಾಧನೆ ಹೇಗೆ ನಡೆಯುವುದೋ ಎಂದು ಸೋತು ಹೋದವನಾಗಿ ಬಂದ ದಿನದಲ್ಲಿ ದೇವರ ಆತ್ಮನು ಬಲವಾಗಿ ಸಭೆಯಲ್ಲಿ ಕಾರ್ಯಮಾಡಿ, ಅನೇಕರಿಗೆ ಬಿಡುಗಡೆ, ಸಂತೋಷ, ಅಭಿಷೇಕದಲ್ಲಿ ತುಂಬಿರುವುದನ್ನು ಸಭೆಯಲ್ಲಿ ಕಂಡಿದ್ದೇನೆ. ಇದೇ ದೇವರ ಅತಿಶಯವಾದ ಕೃಪೆ. ಬಲಾಧಿಕ್ಯವು

ನೀನು ಉಸಿರಿದ ಧರ್ಮಶಾಸ್ತ್ರವು ಸಾವಿರಾರು ಚಿನ್ನಬೆಳ್ಳಿಯ ನಾಣ್ಯಗಳಿಗಿಂತಲೂ ನನಗೆ ಅತಿಪ್ರಿಯವಾಗಿದೆ (ಕೀರ್ತ. 119:72).

ದೇವರದ್ದೇ ಹೊರತು ನಮ್ಮದ್ದಲ್ಲ. ಆತನ ನಾಮಕ್ಕೆ ಸ್ತೋತ್ರವಾಗಲಿ. "ನಿನ್ನ ಕೃಪೆಗನುಸಾರವಾಗಿ ನನ್ನನ್ನು ಚೈತನ್ಯಪಡಿಸು (ಕೀರ್ತ. 119:88).

5) ಕಾದಿರುವವರಿಗೆ ಕೃಪೆ (ಯೆಶಾ. 30:18): ದೇವರು ತನ್ನ ಕೃಪೆಯನ್ನು ನಮ್ಮ ಮೇಲೆ ಸುರಿಸಲು ಕಾದಿದ್ದಾರೆ. ಆದರೆ ಅದನ್ನು ಹೊಂದಿಕೊಳ್ಳಲು ಕಾದಿರಬೇಕು. ಅನೇಕ ವೇಳೆ ನಾವು ಅಧಿಕಾರಿಗಳಿಂದ ಸಹಿ ಹಾಕಿಸಿಕೊಳ್ಳುವುದಕೋಸ್ಕರ ಗಂಟೆಗಟ್ಟಲೇ, ದಿನಗಟ್ಟಲೆ ಕಾದಿದ್ದುಕೊಂಡು, ಕೆಲಸ ಮಾಡಿಸಿಕೊಳ್ಳುತ್ತೇವೆ. ಅದು ನಮಗೆ ಬೇಸರವೆನಿಸುವುದಿಲ್ಲ. ಆದರೆ ದೇವರ ಸನ್ನಿಧಿಯಲ್ಲಿ ಕುಳಿತು ಪ್ರಾರ್ಥಿಸಲು, ಆತನಿಂದ ಆಶೀರ್ವಾದ, ಕೃಪೆ ಹೊಂದಿಕೊಳ್ಳಲು ನಾವು ಹಿಂದೆ ಮುಂದೆ ನೋಡುತ್ತೇವೆ. ಪ್ರಿಯ ಸ್ನೇಹಿತನೇ ರಾಜನ ಸಂಕಲ್ಪಗಳು (ಅಧಿಕಾರಿಯ) ಯೆಹೋವನ ಕೈಯಲ್ಲಿ ನೀರಿನ ಕಾಲಿವೆಗಳಂತೆ ಇವೆ. ತನಗೆ ಬೇಕಾದ ಕಡೆಗೆ ತಿರುಗಿಸುತ್ತಾನೆ (ಜ್ಞಾನೋ. 21:1). ಆತನ ಕೃಪೆಗಾಗಿ ಕಾದಿರುವವರು ಧನ್ಯರು (ಯೆಶಾ. 30:19).

**"ಮಹತ್ಕಾರ್ಯಗಳನ್ನು ನಡಿಸುವುದಕ್ಕೆ ಆತನೊಬ್ಬನೇ ಶಕ್ತನು. ಆತನ ಕೃಪೆಯು ಶಾಶ್ವತವಾದದ್ದು"** (ಕೀರ್ತ. 136:4).

ದಾವೀದನು ಸೌಲನ ಭೀತಿಯಿಂದ ಓಡಿ ಹೋಗಿ ಅಡಗಿಸಿಕೊಂಡಾಗ ದೇವರು ತನ್ನ ಕೃಪೆಯಿಂದ ತನ್ನ ಪ್ರಾಣವನ್ನು ಹೋಲಿಸಿರುವುದಕ್ಕಾಗಿ ದೇವರ ಕೊಂಡಾಡುತ್ತಾನೆ. "ಕರ್ತನೆ ಜನಾಂಗಗಳಲ್ಲಿ ನಿನ್ನನ್ನು ಸ್ತುತಿಸುವೆನು. ಸರ್ವದೇಶದೊಳಗೆ ನಿನ್ನನ್ನು ಕೊಂಡಾಡುವೆನು. ಯಾಕೆಂದರೆ ನಿನ್ನ ಕೃಪೆಯು ಆಕಾಶವನ್ನು, ನಿನ್ನ ಸತ್ಯತೆಯು ಮುಗಿಲನ್ನು ನಿಲುಕುವಷ್ಟು ದೊಡ್ಡದಾಗಿದೆ (ಕೀರ್ತ. 57:9–10). ಪ್ರಿಯ ದೇವ ಮಗುವೆ ನೀನು ಹೊಂದಿದ ದೇವರ ಕೃಪೆಯನ್ನು ವ್ಯರ್ಥಮಾಡಿಕೊಳ್ಳಬೇಡಾ (2 ಕೊರಿ. 6:1) ಹಾಗೂ ಈ ನಿಜವಾದ ಕೃಪೆಯಲ್ಲಿ ನಿಲ್ಲು (1 ಪೇತ್ರ. 5:12).

ಕೃಪಾಪೂರ್ಣನಾದ ದೇವರು ಆಶೀರ್ವಾದಿಸಲಿ.

ಮುಂದುವರಿಯುವದು......

ಕರ್ತನಲ್ಲಿ ನಿಮ್ಮ ಪ್ರೀತಿಯ

**ಪಾ॥ ರೋನಾಲ್ಡ್ ಮಚಾದೋ**

**ಬೇತೇಲ್ ಚರ್ಚ್.**

---


# ನಮ್ಮೊಂದಿಗೆ ಆಚರಿಸಿ

**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**

**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**
**ಮೊಬೈಲ್: 9902334941**


**"ದಯಾದೃಷ್ಟಿಯುವನು ಆಶೀರ್ವಾದವನ್ನು ಪಡೆಯುವನು; ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ."** ಜ್ಞಾನೋಕ್ತಿ 22:9.

ನನ್ನ ಮನಸ್ಸು ನಿನ್ನ ನಿಬಂಧನೆಗಳಲ್ಲಿ ಆಸಕ್ತವಾಗಲಿ; ಆಗ ನನ್ನ ಆಶಾಭಂಗಕ್ಕೆ ಕಾರಣವಿರುವದಿಲ್ಲ (ಕೀರ್ತ. 119:80).

# ಘನಪಡಿಸುವ ದೇವರು

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು.

**"ನಾನು ನಿಮ್ಮ ದುರವಸ್ಥೆಯನ್ನು ನಿಮ್ಮ ಕಣ್ಣೆದುರಿಗೆ ತಪ್ಪಿಸುವಾಗ ನಿಮ್ಮನ್ನು ಲೋಕದ ಸಕಲ ಜನಾಂಗಗಳಲ್ಲಿ ಕೀರ್ತಿ ಸ್ತೋತ್ರಗಳಿಗೆ ಗುರಿಮಾಡುವೆನು"** (ಚೆಫ. 3:20).

ಪ್ರಿಯರೇ, ಇಂದು ಕರ್ತನು ನಿಮ್ಮನ್ನು ಘನಪಡಿಸಲು ಶಕ್ತನಾಗಿದ್ದಾನೆ. ನೀವು ನಿಮ್ಮ ದೇವರಾದ ಯೆಹೋವನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಈಗ ನಿಮಗೆ ಬೋಧಿಸುವ ಆತನ ಆಜ್ಞೆಗಳನ್ನೆಲ್ಲಾ ಅನುಸರಿಸಿ ನಡೆದರೆ ಆತನು ಭೂಮಿಯ ಮೇಲಿರುವ ಎಲ್ಲಾ ಜನಾಂಗಗಳಿಗಿಂತಲೂ ನಿಮ್ಮನ್ನು ಉನ್ನತಸ್ಥಿತಿಗೆ ತರುವನು (ಧರ್ಮೋ. 28:1). ಕರ್ತನು ನಿಮ್ಮನ್ನು ಘನಪಡಿಸುವಾಗ ಯಾವ ಮನುಷ್ಯನಿಂದಲೂ ನಿಮ್ಮನ್ನು ಕೀಳಾಗಿ ಕಾಣಲು ಸಾಧ್ಯವೇ ಇಲ್ಲ. ಈ ವರ್ಷದ ಪ್ರಾರಂಭದಲ್ಲಿಯೇ ಕರ್ತನಾದ ಯೇಸುಕ್ರಿಸ್ತನು ನಿಮಗೆ ಕೊಡುವ ವಾಗ್ದಾನವೇ ನಿಮ್ಮನ್ನು ಕೀರ್ತಿ ಸ್ತೋತ್ರಗಳಿಗೆ ಗುರಿಮಾಡುವೆನು. ಇವತ್ತು ಜನರು ನಿಮ್ಮ ಹೆಸರನ್ನು ಅಪಕೀರ್ತಿಗೆ ತರಲು ಯೋಚಿಸುವರು. ಆದರೆ ಕರ್ತನು ನಿಮ್ಮ ಪಕ್ಷದಲ್ಲಿದ್ದು ಶತ್ರುಗಳ ಆಲೋಚನೆಗಳನ್ನೆಲ್ಲಾ ನಿರ್ಮೂಲಮಾಡಿ ನಿಶ್ಚಯವಾಗಿಯೂ ನಿಮ್ಮನ್ನು ಕೀರ್ತಿ ಸ್ತೋತ್ರಗಳಿಗೆ ಗುರಿಮಾಡುವನು.

ಅಂದು ಇಸ್ರಾಯೇಲ್ ಜನರನ್ನು ಕಾನನ್ ದೇಶಕ್ಕೆ ನಡಿಸಲೂ, ಕಾನನ್ ದೇಶದಲ್ಲಿರುವ ಅರಸರೊಡನೆಯೂ, ಜನಾಂಗಗಳೊಡನೆಯೂ ಯುದ್ಧಮಾಡುವ ಜವಾಬ್ದಾರಿ, ದೇಶವನ್ನು ಜನರಿಗೆ ಭಾಗಮಾಡಿ ಕೊಡುವುದು ಈ ಎಲ್ಲಾ ಜವಾಬ್ದಾರಿಗಳನ್ನು ಕರ್ತನು ಯೆಹೋಶುವನಿಗೆ ಕೊಡುತ್ತಾನೆ. ಈ ಕಾರ್ಯ ನನ್ನಿಂದ ಹೇಗೆ ತಾನೇ ಸಾಧ್ಯ? ಈ ಜನರು ಮೊಂಡರು, ಗುಣುಗುಟ್ಟುವ ಜನರು ಇವರು ಹೇಗೆ ತಾನೇ ನನಗೆ ಅಧೀನರಾಗುವರು? ಎಂದೆಲ್ಲಾ ಯೆಹೋಶುವನು ಕಳವಳಪಡುವಾಗ **"ಕರ್ತನು ಯೆಹೋಶುವನನ್ನು ನೋಡಿ, ನಾನು ಮೋಶೆಯೊಂದಿಗೆ ಇದ್ದ ಹಾಗೆ ನಿನ್ನೊಂದಿಗೆ ಇರುವೆನು ಎಂಬುದು ಇಸ್ರಾಯೇಲ್ಯರಿಗೆ ಗೊತ್ತಾಗುವುದು"** (ಯೆಹೋ. 3:7). ಅಂದಿನಿಂದ ಕರ್ತನು ಯೆಹೋಶುವನನ್ನು ಘನಪಡಿಸಿದನು.

ದೇವರೇ, ಇದು ಸಾಲದೆಂದೆಣಿಸಿ ನಿನ್ನ ಸೇವಕನ ಬಹುದೂರ ಸಂತಾನದ ವಿಷಯದಲ್ಲಿಯೂ ವಾಗ್ದಾನ ಮಾಡಿದಿ. ದೇವರೇ, ಯೆಹೋವನೇ, ನೀನು ನನ್ನನ್ನು ಕುಲೀನನನ್ನೋ ಎಂಬಂತೆ ಕಟಾಕ್ಷಿಸಿದ್ದೀ. ನೀನು ನಿನ್ನ ಸೇವಕನಾದ ದಾವೀದನನ್ನು ಬಲ್ಲೆ; ಅವನು ತನಗುಂಟಾದ ಘನತೆಯನ್ನು ಕುರಿತು ಇನ್ನೇನು ಹೇಳಾನು (1 ಪೂರ್ವ. 17:17–18).

ದಾವೀದರಾಜನ ಪ್ರಾರ್ಥನೆಯನ್ನು ನಾವಿಲ್ಲಿ ನೋಡುತ್ತೇವೆ. ಕುರಿಗಳನ್ನು ಮೇಯಿಸುತ್ತಿದ್ದ ದಾವೀದನನ್ನು ಮಹಾಘನವುಳ್ಳ ಸಂತತಿಯೂ ಮನುಷ್ಯನನ್ನಾಗಿ ಮಾಡಿದ ಅದೇ ದೇವರು ಈಗಲೂ ನಿಮ್ಮನ್ನು ಉನ್ನತಿಗೆ ತರಲು ಚಿತ್ತವುಳ್ಳವನಾಗಿದ್ದಾನೆ. ಇಂದು ಜನರು ನಮ್ಮನ್ನು ಕಾಣುವ ರೀತಿಯೇ ಬೇರೆ, ಕರ್ತನು ನಮ್ಮನ್ನು ನೋಡುವ ರೀತಿಯೇ ಬೇರೆ. ಮನುಷ್ಯನು ತನ್ನ ಕೆಟ್ಟ ಆಲೋಚನೆಯಿಂದ ಯಾರಿಗೆ ಏನು ಕೇಡು ಮಾಡೋಣ ಎಂದು ಯೋಚಿಸುತ್ತಾನೆ. ಬೇರೆಯವರಿಗೆ ಒಳ್ಳೆದನ್ನು ಬಯಸುವುದಿಲ್ಲ ಅವನಲ್ಲಿ ತಪ್ಪುಗಳನ್ನೇ ಹುಡುಕುತ್ತಾನೆ. ಮನುಷ್ಯನು ಮತ್ತೊಬ್ಬ ಮನುಷ್ಯನನ್ನು ತುಳಿಯಲು ಬಯಸುತ್ತಿರುತ್ತಾನೆ ಆದರೆ ಕರ್ತನಾದರೋ ನಿಮ್ಮನ್ನು ಘನಪಡಿಸುತ್ತಾನೆ.

ಒಂದು ಸಾರಿ ಮೈಕಲ್ ಏಂಜೆಲೋ ಎಂಬ ಶಿಲ್ಪಿಯೂ ಮತ್ತು ಸ್ನೇಹಿತನು ಇಬ್ಬರು ಒಟ್ಟಾಗಿ ಅರಣ್ಯ ಮಾರ್ಗದಲ್ಲಿ ಹೋಗುತ್ತಿರುವಾಗ ಸ್ವಲ್ಪ ದೂರದಲ್ಲಿ ಒಂದು ಸಣ್ಣ ಕಲ್ಲಿನ ಬಂಡೆಯನ್ನು ಕಾಣುತ್ತಾರೆ. ಇದನ್ನು ನೋಡಿದ ಮೈಕಲ್ ಪರವಶನಾಗಿ ಬಂಡೆಯನ್ನು ದೇವದೂತನಾಗಿ ಕಾಣುತ್ತಾನೆ. ಆತನ ಸ್ನೇಹಿತನಾದರೋ ಆ ಬಂಡೆಯ ಸುತ್ತುವರಿದು ದೃಷ್ಟಿಸಿ ಎಲ್ಲಿ ದೇವದೂತನು ಎಂದು ಪ್ರಶ್ನಿಸುತ್ತಾನೆ. ಈತನಿಗೆ ಸ್ವಲ್ಪವೂ ಕೂಡಾ ಅರ್ಥವಾಗಲಿಲ್ಲ. ಆದರೆ ಮೈಕಲ್ ಎಂಜೆಲೋ ಉಳಿಯಿಂದ ಬಂಡೆಯನ್ನು ಕೆತ್ತಿ ದೇವದೂತನ ಶಿಲೆಯನ್ನಾಗಿ ಮಾಡಿದಾಗ ಸ್ನೇಹಿತನಿಗೆ ಆಶ್ಚರ್ಯವಾಯಿತು. ಅವನ ಬುದ್ಧಿಗೆ ಕೂಡಾ ನಿಲುಕಲಿಕ್ಕೆ ಸಾಧ್ಯವಾಗಲಿಲ್ಲ.

ನೀವು ಮರಗಳನ್ನು ಮರಗಳಾಗಿ ನೋಡಿದರೆ, ಬಡಗಿಯು

ನಿನ್ನ ರಕ್ಷಣೆಯ ಬಯಕೆಯಿಂದಲೇ ನನ್ನ ಮನವು ಬಲಗುಂದಿತು; ನಾನು ನಿನ್ನ ವಾಕ್ಯದಲ್ಲೇ ನಿರೀಕ್ಷೆಯುಳ್ಳವನಾಗಿದ್ದೇನೆ (ಕೀರ್ತ. 119:81).

ಅದನ್ನು ಸುಂದರವಾದ ಮೇಜು, ಕುರ್ಚಿ, ಟೀಪಾಯಿಗಳನ್ನಾಗಿ ನೋಡುತ್ತಾನೆ. ನೀವು ಜೇಡಿ ಮಣ್ಣನ್ನು ಮಣ್ಣಾಗಿ ನೋಡಿದರೆ ಕುಂಬಾರನು ಅದನ್ನು ಸುಂದರವಾದ ಪಾತ್ರೆಗಳನ್ನಾಗಿ ನೋಡುತ್ತಾನೆ. ಅಂದು ಯೋಸೇಫನನ್ನು ಸಹೋದರರು ಕನಸುಗಾರನಾಗಿ ನೋಡಿದರು. ದೇವರು ಯೋಸೇಫನನ್ನು ಐಗುಪ್ತದ ಸರ್ವಾಧಿಕಾರಿಯಾಗಿ ನೋಡಿದನು. ದಾವೀದನನ್ನು ಎಲ್ಲರೂ ಗುಲಾಮನಾಗಿ ಕುರಿಗಳೊಂದಿಗೆ ಮಲಗಿರುವ ಗೊಲ್ಲನಾಗಿ ನೋಡಿದರು. ದೇವರು ದಾವೀದನನ್ನು ಇಸ್ರಾಯೇಲ್ಯರ ರಾಜ್ಯನಾಗಿಯೂ, ಮಹಾಘನವುಳ್ಳ ಸಂತತಿಯಾಗಿ ನೋಡಿದನು, ಮರಿಯಳು ಬಡ ಕುಟುಂಬಸ್ಥದವಳಾಗಿದ್ದಳು. ಆದರೆ ದೇವರ ಮಗನಿಗೆ ತಾಯಿಯಾಗುವಂತ ಪಾತ್ರಯಾಗಿ ಕರ್ತನು ಮಾಡಿದನು. **"ಆತನು ತನ್ನ ದಾಸಿಯ ದೀನಸ್ಥಿತಿಯ ಮೇಲೆ ಲಕ್ಷವಿಟ್ಟಿದ್ದಾನೆ. ಇಗೋ ಇಂದಿನಿಂದ ಎಲ್ಲಾ ಸಂತತಿಯವರು ನನ್ನನ್ನು ಧನ್ಯಳೆಂದು ಹೊಗಳುವರು"** (ಲೂಕ. 1:48).

ಪ್ರಿಯರೇ, ಇಂದು ನಿಮ್ಮನ್ನು ಬಡವರಾಗಿ ವಿದ್ಯೆಯಿಲ್ಲದವರಾಗಿ, ಕುರೂಪಿಗಳಾಗಿ ಕಾಣಬಹುದು ಆದರೆ ನೀವು ರಾಜಾಧಿರಾಜನ, ಕರ್ತಾದಿ ಕರ್ತನ ಮಕ್ಕಳಾಗಿದ್ದೀರಿ. **"ಆತನು ದೀನನನ್ನು ಧೂಳಿಯಿಂದ ಎತ್ತಿ, ದರಿದ್ರನನ್ನು ತಿಪ್ಪೆಯಿಂದ ಎಬ್ಬಿಸಿ ಪ್ರಭುಗಳೊಂದಿಗೆ ಕುಳ್ಳಿರಿಸಿ ಅವನಿಗೆ ಮಹಿಮಾಸನವನ್ನು ಬಾಧ್ಯತೆಯಾಗಿ ಅನುಗ್ರಹಿಸುವವನಾಗಿದ್ದಾನೆ"** (1 ಸಮು. 2:8). ಕರ್ತನು ನಿಮ್ಮನ್ನು ಉನ್ನತಕೇರಿಸಿ ಘನಪಡಿಸುತ್ತಾನೆ.

ಹೌದು ಕಳೆದ ವರ್ಷ ಅನೇಕ ಸನ್ನಿವೇಶಗಳಲ್ಲಿ ನೀವು ದಾಟಿ ಬಂದಿರಬಹುದು. ಚೆಫ. 3:14ರಿಂದ 20 ವಾಕ್ಯದ ಪ್ರಕಾರವಾಗಿ ಕರ್ತನು ಹೇಳುವುದೇನೆಂದರೆ ಆತನ ಪ್ರಸನ್ನತೆ ನಿಮ್ಮನ್ನು ಆವರಿಸಿಕೊಳ್ಳುವಂಥ ದಿನವಾಗಿದೆ. ಅದು ಈಗಾಗಲೇ ಬಂದಿದೆ. ಪ್ರಿಯ ದೇವ ಸಭೆಯೇ ಭಾರಪಡಬೇಡ. ಕರ್ತನ ತೇಜಸ್ಸು ನಿನ್ನಲ್ಲಿ ಕಾಣಿಸುವ ದಿನವಾಗಿದೆ. ನಿನ್ನ ದೇವರಾದ ಕರ್ತನು ನಿನಗೆ ವೈಭವ ಕೊಟ್ಟಿರುವುದನ್ನು ನೋಡಿ ನಿನ್ನನ್ನು ತಿಳಿಯದ ಜನಾಂಗವು ನಿನ್ನ ಆಶ್ರಯಕ್ಕೆ ಓಡಿ ಬರುವುದು ಅರಸರು ನಿನ್ನಲ್ಲಿನ ಉದಯ ಪ್ರಕಾಶಕ್ಕೆ ಬರುವರು. ನಿನಗೆ ವಿಧಿಸಿದ ದಂಡನೆಗಳನ್ನು ತಪ್ಪಿಸಿದ್ದೇನೆ, ನಿನ್ನ ಶತ್ರುವನ್ನು ತಳ್ಳಿಬಿಟ್ಟಿದ್ದೇನೆ, ಕರ್ತನು ರಕ್ಷಿಸುವ ಶೂರನಾಗಿ ನಿನ್ನ ಮಧ್ಯದಲ್ಲಿದ್ದಾನೇ ಕರ್ತನು ನಿನ್ನಲ್ಲಿ ಉಲ್ಲಾಸಿಸುತ್ತಾನೆ, ನಿನ್ನಲ್ಲಿ ಶೋಕಿಸುವವರನ್ನು ಸೇರಿಸಿಕೊಳ್ಳುತ್ತಾನೆ, ನಿನ್ನಲ್ಲಿ ಕುಂಟುವವರನ್ನು ಉದ್ಧರಿಸುತ್ತಾನೆ, ತನ್ನ ಜನರನ್ನು ಬಾಧಿಸುವವರಿಗೆ ವಿರುದ್ಧವಾಗಿ ಹೋರಾಡುತ್ತಾನೆ, ನಿನ್ನಲ್ಲಿ ಚದರಿಸಲ್ಪಟ್ಟವರನ್ನು ಕೂಡಿಸುತ್ತಾನೆ, ತನ್ನ ಜನರ ದುರವಸ್ಥೆಯನ್ನು ತಪ್ಪಿಸಿ ನಿತ್ಯಾನಂದವನ್ನು ಉಂಟು ಮಾಡುತ್ತಾನೆ. ಈ ಆಲಯದ ಮುಂದಿನ ವೈಭವವು ಹಿಂದಿನ ವೈಭವಕ್ಕಿಂತ ವಿಶೇಷವಾಗಿರುವದು. ಇದು ಕರ್ತನ ನುಡಿಯಾಗಿದೆ.

ಪ್ರಭಾವೈಶ್ವರ್ಯಗಳು ನಿನ್ನ ಸನ್ನಿಧಿಯಿಂದ ಬರುತ್ತವೆ; ನೀನು ಸರ್ವಾಧಿಕಾರಿಯು; ಆದದರಿಂದ ನಮ್ಮ ದೇವರೇ, ನಾವು ನಿನಗೆ ಕೃತಜ್ಞತಾಸ್ತುತಿ ಮಾಡುತ್ತಾ ನಿನ್ನ ಪ್ರಭಾವವುಳ್ಳ ನಾಮವನ್ನು ಕೀರ್ತಿಸುತ್ತೇನೆ. ನಾವು ಈ ಪ್ರಕಾರ ಸ್ವೇಚ್ಛೆಯಿಂದ ಕಾಣಿಕೆಗಳನ್ನು ಸಮರ್ಪಿಸಲು ಶಕ್ತಿ ಹೊಂದಿದ್ದಕ್ಕೆ ನಾನಾಗಲಿ ನನ್ನ ಪ್ರಜೆಗಳಾಗಲಿ ಎಷ್ಟರವರು? ಸಮಸ್ತವು ನಿನ್ನಿಂದಲೇ; ನೀನು ಕೊಟ್ಟದ್ದನ್ನೇ ನಿನಗೆ ಕೊಟ್ಟೆವು ( 1 ಪೂರ್ವ. 29:12–14). ಆತನೊಬ್ಬನೇ ನಿಮ್ಮ ಸ್ತೋತ್ರಕ್ಕೆ ಪಾತ್ರನು; ಆತನು ನಿಮ್ಮ ದೇವರು ನೀವು ನೋಡಿದ ಆ ಮಹಾಭಯಂಕರವಾದ ಮಹತ್ಕಾರ್ಯಗಳನ್ನು ನಿಮಗೋಸ್ಕರ ನಡಿಸಿದವನು ಆತನೇ (ಧರ್ಮೋ. 10:21).

ಇಗೋ ನನ್ನ ಸೇವಕನು ಕೃತಾರ್ಥನಾಗುವನು; ಅವನು ಉನ್ನತವಾಗಿ ಮೇಲಕ್ಕೇರಿ ಮಹೋನ್ನತ ಪದವಿಗೆ ಬರುವನು (ಯೆಶಾ. 52:13). ಹೀಗೆ "ಬಲವನ್ನೂ ತೇಜಸ್ಸನ್ನೂ ಹೊದ್ದುಕೊಂಡಿರುವಳು; ಭವಿಷ್ಯತ್ತಿನ ಭಯವಿಲ್ಲದೆ ನಗುತ್ತಿರುವಳು (ಜ್ಞಾನೋ. 31:25).

ನಿಶ್ಚಯವಾಗಿ ಕರ್ತನು ನಿನ್ನ ದುರವಸ್ಥೆಯನ್ನು ನಿಮ್ಮ ಕಣ್ಣೆದುರಿನಿಂದ ತಪ್ಪಿಸಿ ಕೀರ್ತಿಸ್ತೋತ್ರಗಳಿಗೆ ಗುರಿಮಾಡುವನು.

ಕರ್ತನು ತಾನೇ ಚೀಯೋನಿನಿಂದ ನಿಮ್ಮನ್ನು ಹೇರಳವಾಗಿ ಆಶೀರ್ವದಿಸಲಿ, ಆಮೆನ್.

ಎಲ್ಲಾ ಸಂಪೂರ್ಣತೆಗೂ ಮೇರೆಯುಂಟೆಂದು ಬಲ್ಲೆನು; ಆದರೆ ನಿನ್ನ ಆಜ್ಞಾಶಾಸನವು ಅಪಾರವಾದದ್ದು (ಕೀರ್ತ. 119:96).

ಆರೋಗ್ಯ ಸ್ವರ

# ಪೈನಾಪಲ್‌ನಿಂದ ಫೈನ್ ಡಿಶ್

ಸ್ವಲ್ಪ ಹುಣಸೆಹಣ್ಣು ಒಂದು ಲಿಂಬೆಹಣ್ಣು ಗಾತ್ರ, ಬೆಲ್ಲ ಅಷ್ಟೇ ಗಾತ್ರದ್ದು, ಉಪ್ಪು ರುಚಿಗೆ, ಕರಿಬೇವು. ಎಣ್ಣೆಸ್ವಲ್ಪ ತೆಂಗಿನಕಾಯಿ ತುರಿ ಎರಡು ಬಟ್ಟಲು.

ತಯಾರಿಸುವ ವಿಧಾನ : ಮೊದಲು ಎಳ್ಳನ್ನು ಹುರಿಯಿರಿ (ಎಣ್ಣೆ ಹಾಕದೆ). ಅನಂತರ ಮೆಣಸಿನ ಕಾಯಿ ಉದ್ದಿನಬೇಳೆ, ಧನಿಯಾ, ಮೆಂತ್ಯ, ಕರಿಬೇವನ್ನು ಎಣ್ಣೆ ಹಾಕಿ ಹುರಿಯಿರಿ. ಎಲ್ಲವನ್ನು ಮಿಕ್ಸಿಗೆ ಹಾಕಿ ತೆಂಗಿನ ತುರಿಯೊಂದಿಗೆ ರುಬ್ಬಿಕೊಳ್ಳಿ. ಹುಣಸೆ ರಸ, ಉಪ್ಪು, ಅರಿಸಿನ ಪುಡಿ, ಬೆಲ್ಲವನ್ನು ಒಂದು ಪಾತ್ರೆಯಲ್ಲಿ ಹಾಕಿ ಕುದಿಯಲು ಇಡಿ.

ಕುದಿಯುವ ಮಿಶ್ರಣಕ್ಕೆ ಪೈನಾಪಲ್ ಹೋಳುಗಳನ್ನು ಹಾಕಿ. ಬೇಗನೆ ಬೇಯುತ್ತದೆ. ಅನಂತರ ಅದಕ್ಕೆ ರುಬ್ಬಿಟ್ಟ ಮಸಾಲೆಯನ್ನು ಹಾಕಿ ಕುದಿಸಿ ಕರಿಬೇವಿನ ಸೊಪ್ಪನ್ನು ಹಾಕಿದರೆ ಮೆಣಸುಕಾಯಿ ಎಂಬ ವ್ಯಂಜನ ಸಿದ್ಧಿ. ಇದು ಅನ್ನಕ್ಕೆ ಮಾತ್ರವಲ್ಲದೆ ರೊಟ್ಟಿ, ಚಪಾತಿ, ಇಡ್ಲಿ, ದೋಸೆಗಳಿಗೂ ರುಚಿಕರ.

ಪುಡಿ ಚಿತ್ರಾನ್ನ: ಸಾಮಗ್ರಿ : ಹುಣಸೇ ರಸ ಕಾಲುಕಪ್, ಉಪ್ಪು ರುಚಿಗೆ, ಕಡ್ಲೇಬೇಳೆ –3 ಚಮಚ, ಉದ್ದಿನ ಬೇಳೆ–2 ಚಮಚ, ಮೆಂತ್ಯ – ಸ್ವಲ್ಪ, ಧನಿಯಾ –1ಚಮಚ, ಒಣಮೆಣಸಿನಕಾಯಿ–6–7, ಜೀರಿಗೆ – ಸ್ವಲ್ಪ, ಚಕ್ಕೆ – ಸ್ವಲ್ಪ, ಅನ್ನ–1 ಬಟ್ಟಲು, ಒಗ್ಗರಣೆಗೆ – ಶೇಂಗಾಬೀಜ, ಉದ್ದಿನ ಬೇಳೆ, ಕಡ್ಲೇಬೇಳೆ, ಸಾಸಿವೆ, ಕರಿಬೇವು, ಎಣ್ಣೆ.

ವಿಧಾನ : ಮೊದಲು ಉದ್ದಿನ ಬೇಳೆ, ಕಡ್ಲೇಬೇಳೆ, ಮೆಂತ್ಯೆ, ಧನಿಯಾ, ಚಕ್ಕೆ ಎಲ್ಲವನ್ನೂ ಬೇರೆಬೇರೆಯಾಗಿ ಹುರಿದುಕೊಂಡು ನಂತರ ತರಿತರಿಯಾಗಿ ಪುಡಿಮಾಡಿಕೊಳ್ಳಬೇಕು. ಒಂದು ಬಾಣಲೆಯಲ್ಲಿ ಎಣ್ಣೆಯನ್ನು ಹಾಕಿ ನಂತರ ಹುಣಸೇರಸವನ್ನು ಹಾಕಿ, ನಂತರ ಈ ಪುಡಿಯನ್ನು ಹಾಕಿ ಉಪ್ಪು ಬೆರೆಸಿ. ಅನ್ನವನ್ನು ಸೇರಿಸಿ ಚೆನ್ನಾಗಿ ಕಲೆಸಿ. ಕೊನೆಗೆ ಒಗ್ಗರಣೆ ಹಾಕಿ, ಮೇಲೆ ಕೊತ್ತಂಬರಿ ಸೊಪ್ಪನ್ನು ಉದುರಿಸಿದರೆ ಪುಡಿ ಚಿತ್ರಾನ್ನ ರೆಡಿ.

ಸಂಗ್ರಹ.

---

ಪ್ರಾರ್ಥನಾ ಮನವಿಗಳು

- ಭಾರತ ದೇಶದಲ್ಲಿ ಕರ್ತನ ನಾಮದ ಮಹಿಮೆಗಾಗಿ ಶ್ರಮಿಸುತ್ತಿರುವ ಪ್ರತಿಯೊಬ್ಬ ದೇವ ಸೇವಕರುಗಳಿಗಾಗಿ, ಪ್ರತಿಯೊಂದು ಸಂಸ್ಥೆಗಳಿಗಾಗಿ, ಸಭೆಗಳಿಗಾಗಿ, ಮಾಧ್ಯಮ ಸೇವೆ, ಪತ್ರಿಕೆ ಸೇವೆಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸೋಣ.
- ನಮ್ಮ ರಾಜ್ಯದಲ್ಲಿ, ದೇಶದಲ್ಲಿ ಸೇವೆಮಾಡುತ್ತಿರುವ ಸೇವಕರನ್ನು, ಅವರ ಕುಟುಂಬವನ್ನು ಕರ್ತನು ಕಾದುಕಾಪಾಡುವಂತೆ, ಕರ್ತನ ಸೇವೆಮಾಡಲು ದೀರ್ಘ ಆಯಸ್ಸು ಅನುಗ್ರಹಿಸಿವಂತೆ ಪ್ರಾರ್ಥಿಸಿರಿ.
- ದೇವರ ಸ್ವರ ಮಾಸ ಪತ್ರಿಕೆಯ ಸೇವೆಯನ್ನು ಕರ್ತನು ಆಶೀರ್ವದಿಸಿ ವಿಶಾಲತೆಗೆ ನಡೆಸುವಂತೆ ಸರಿಯಾದ ಸಮಯಕ್ಕೆ ಮಾಸ ಪತ್ರಿಕೆಯು ಪ್ರತಿಯೊಬ್ಬರಿಗೂ ತಲುಪುವಂತೆ ಪ್ರಾರ್ಥಿಸಿರಿ.
- ಭಾರತ ದೇಶದ ಮೇಲೆ ಕರ್ತನ ಸುಭದ್ರತೆಗಾಗಿ ಪ್ರಾರ್ಥಿಸೋಣ.
- ನಾಶವಾಗುತ್ತಿರುವ ಪ್ರತಿಯೊಂದು ಆತ್ಮಗಳಿಗಾಗಿ ಪ್ರಾರ್ಥಿಸೋಣ.

ಯೆಹೋವನೇ, ಸಂಪೂರ್ಣಮನಸ್ಸಿನಿಂದ ಮೊರೆಯಿಟ್ಟಿದ್ದೇನೆ, ಸದುತ್ತರವನ್ನು ದಯಪಾಲಿಸು
(ಕೀರ್ತ. 119:145).

# ಪ್ರಶ್ನೋತ್ತರಗಳ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಆದಕಾರಣ ನಿಮ್ಮ ಹಳೆಯ ಜೀವಿತದೊಂದಿಗೆ ಅಥವಾ ತಪ್ಪದಾ ಜೀವಿತದೊಂದಿಗೆ ಎಷ್ಟೆ ಉಪವಾಸ ಪ್ರಾರ್ಥನೆ ಮಾಡಿದರೂ ದೇವರನ್ನು ಮೆಚ್ಚಿಸಲ್ಲಿಕ್ಕೆ ಸಾಧ್ಯವಿಲ್ಲ. ದು:ಖಕರವಾದ ಸಂಗಾತಿ ಏನೆಂದರೆ ಇಂದು ಅನೇಕ ಕ್ರೈಸ್ತ ವಿಶ್ವಾಸಿಗಳು ತಪ್ಪದಾ ಜೀವವನ್ನು ನಡೆಸುತ್ತಾರೆ, ಹಾಗೆಯೇ ಉಪವಾಸ ಪ್ರಾರ್ಥನೆ ಮಾಡುತ್ತಾರೆ. ಇದರಿಂದಾಗಿ ದೇವರ ಆಶೀರ್ವಾದವನ್ನು ಕಳೆದುಕೊಂಡು ಜೀವಿಸುತ್ತಾರೆ. ದೇವರ ವಾಕ್ಯ ನಮಗೆ ಸ್ಪಷ್ಟವಾಗಿ ತಿಳಿಸುವುದೇನೆಂದರೆ ದೇವರು ಪ್ರತಿಯೊಂದು ಮನುಷ್ಯನ ಹೃದಯವನ್ನು ತಿಳಿದುಕೊಂಡಿದ್ದಾನೆ (ಇಬ್ರಿ. 4:13). ನಾವು ಯಾವಾತನಿಗೆ ಲೆಕ್ಕ ಒಪ್ಪಿಸಬೇಕಾಗಿದೆಯೋ ಆತನ ದೃಷ್ಟಿಗೆ ಸಮಸ್ತವೂ ಮುಚ್ಚುಮರೆ ಇಲ್ಲದ್ದಾಗಿಯೂ ಬೈಲಾದದ್ದಾಗಿಯೂ ಇದೆ. ಆತನ ಸನ್ನಿಧಿಯಲ್ಲಿ ಆಗೋಚರವಾಗಿರುವ ಸೃಷ್ಟಿಯೂ ಒಂದು ಇಲ್ಲ. ಯೋಹಾ. 2:23–25 ಆತನು ಪಸ್ಕ ಹಬ್ಬದ ಜಾತ್ರೆಯಲ್ಲಿ ಯರೂಸಲೇಮಿನೊಳಗೆ ಇದ್ದಾಗ ಎಲ್ಲಾ ಜನರು ಆತನು ಮಾಡಿದ ಸೂಚಕಕಾರ್ಯಗಳನ್ನು ನೋಡಿ ಆತನ ಹೆಸರಿನಲ್ಲಿ ನಂಬಿಕೆ ಇಟ್ಟರು. ಆದರೆ ಯೇಸು ಎಲ್ಲರನ್ನು ಬಲ್ಲವನಾದರಿಂದ ಅವರಿಗೆ ವಶವಾಗಲಿಲ್ಲ. ಆತನು ಪ್ರತಿ ಮನುಷ್ಯನ ಅಂತರ್ಯವನ್ನು ತಿಳಿದವನಾದ ಕಾರಣ ಯಾವಾಗ ಯಾವ ಮನುಷ್ಯನ ವಿಷಯದಲ್ಲಿ ಆತನಿಗೆ ಸಾಕ್ಷಿ ಕೊಡಬೇಕಾದ ಅವಶ್ಯ ಇರಲಿಲ್ಲ. (1 ಸಮು. 16:7) ಆದರೆ ಯೆಹೋವನು ಸಮುವೇಲನಿಗೆ ನೀನು ಅವನ ಚೆಲುವಿಕೆಯನ್ನು ನೀಲವನ್ನು ನೋಡಬೇಡ. ನಾನು ಅವನನ್ನು ತಳ್ಳಿಬಿಟ್ಟಿದ್ದೇನೆ. ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನು ನೋಡುವವನಾಗಿದ್ದೇನೆ ಅಂದನು. ಮೇಲಿನ ವಾಕ್ಯಗಳಿಂದ ನಾವು ತಿಳಿದುಕೊಳ್ಳುವ ಸತ್ಯವೆಂದರೆ ನಾವು ಒಬ್ಬ ಮನುಷ್ಯನನ್ನು ಮೋಸಪಡಿಸಬಹುದು, ದೇವರನ್ನು ಮೋಸಪಡಿಸಲು ಸಾಧ್ಯವಿಲ್ಲ. ಅದಕ್ಕಾಗಿ ಯೋವೇ. 2:12–13 ಯೆಹೋವನು ಇಂತೆನ್ನುತ್ತಾನೆ, ಈಗಲಾದರೋ ನೀವು ಮನ:ಪೂರ್ವಕವಾಗಿ ನನ್ನ ಕಡೆಗೆ ತಿರುಗಿಕೊಂಡು ಉಪವಾಸಮಾಡಿರಿ, ಅಳಿರಿ, ಗೋಳಾಡಿರಿ; ನಿಮ್ಮ ಬಟ್ಟೆಗಳನ್ನಲ್ಲ, ನಿಮ್ಮ ಹೃದಯಗಳನ್ನು ಹರಿದುಕೊಂಡು ನಿಮ್ಮ ದೇವರಾದ ಯೆಹೋವನ ಕಡೆಗೆ ತಿರುಗಿಕೊಳ್ಳಿರಿ; ಆತನು ದಯೆಯೂ ಕನಿಕರವೂ ದೀರ್ಘಶಾಂತಿಯೂ ಮಹಾಕೃಪೆಯೂ ಉಳ್ಳವನಾಗಿ ಮಾಡಬೇಕೆಂದಿದ್ದ ಕೇಡಿಗೆ ಮನಮರುಗುತ್ತಾನೆ. ಆದುದರಿಂದ ಹೃದಯದಲ್ಲಿ ಪಶ್ಚಾತ್ತಾಪವಿಲ್ಲದೆ, ಶುದ್ಧೀಕರಣವಿಲ್ಲದೆ, ಪರಿಶುದ್ಧತೆಯಿಲ್ಲದೆ, ಮಾನಸಾಂತರಯಿಲ್ಲದೆ, ಮಾಡುವ ಉಪವಾಸವೂ ಕಪಟ ಉಪವಾಸ ಪ್ರಾರ್ಥನೆ ಎಂಬುದಾಗಿ ದೇವರ ವಾಕ್ಯ ನಮ್ಮನ್ನು ಎಚ್ಚರಿಸುತ್ತದೆ. ಈ ರೀತಿಯ ಉಪವಾಸಪ್ರಾರ್ಥನೆ ಮಾಡಿದವರಿಗೆ ಕೇವಲ ನಾವು ಉಪವಾಸ ಪ್ರಾರ್ಥನೆ ಮಾಡಿದ್ದೇವೆ ಎಂಬ ತೃಪ್ತಿಸಿಗುತ್ತದೆ ಹೊರತು ದೇವರ ಮೆಚ್ಚಿಗೆ ಹಾಗೂ ಆಶೀರ್ವದ ಸಿಗುವುದಿಲ್ಲ. ಇಂತಹ ಉಪವಾಸ ಪ್ರಾರ್ಥನೆಗೆ ಕಪಟ ಉಪವಾಸ ಪ್ರಾರ್ಥನೆ ಎಂಬುದಾಗಿ ಹೇಳುತ್ತಾನೆ, ನನಗೆ ಗೊತ್ತಿರುವಂತಹ ಒಂದು ಸಹೋದರನು ಒಂದು ದಿನ ಒಂದು ಸ್ತ್ರೀಯೊಂದಿಗೆ ನನ್ನ ಬಳಿಗೆ ಬಂದನು. ಈ ಸಹೋದರನಿಗೆ ಮದುವೆ ಆಗಿ ವಿವಾಹ ವಿಚ್ಛೇದನ ಕೊಟ್ಟಿದ್ದನು. ನನ್ನ ಬಳಿ ಆತನು ಹೇಳುತ್ತಾ ಇದ್ದಾನೆ. ನನ್ನೊಂದಿಗೆ ಬಂದ ಸ್ತ್ರೀಯನ್ನು ಪ್ರೀತಿಸುತ್ತಿದ್ದೇನೆ. ಈ ಸ್ತ್ರೀಯು ಮದುವೆಯಾಗಿದ್ದರೂ ಇನ್ನೊಂದು ಹುಡುಗನೊಂದಿಗೆ ಪ್ರೀತಿಯಾಗಿ ತನ್ನ ಗಂಡನನ್ನು ತ್ಯಜಿಸಿ ಪ್ರೀತಿಮಾಡುವ ಹುಡುಗನೊಟ್ಟಿಗೆ ತನ್ನ ಗಂಡನ ಮನೆಬಿಟ್ಟು ಬಂದಿದ್ದಳು. ಸ್ವಲ್ಪ ದಿವಸಗಳ ನಂತರ ಈ ಹುಡುಗನು ಈ ಸ್ತ್ರೀಯನ್ನು ಬಿಟ್ಟು ಓಡಿ ಹೋದನು. ಅತ್ತ ಕಡೆ ಗಂಡನು ಇಲ್ಲ, ಇತ್ತ ಕಡೆ ಈ ಹುಡುಗನು ಇಲ್ಲ. ಅಂತಹ ಪರಿಸ್ಥಿತಿಯಲ್ಲಿ ನಮಗೆ ಪರಿಚಯವಾಯಿತು. ಈಗ ನಾವು ಪರಸ್ಪರ ಪ್ರೀತಿಸುತ್ತಾ ಇದ್ದೇವೆ. ದಯಮಾಡಿ ನಮ್ಮ ಮದುವೆ ಮಾಡಿ ನಾವಿಬ್ಬರೂ ನಮ್ಮ ಮದುವೆಗಾಗಿ 3 ದಿವಸ ಉಪವಾಸ ಪ್ರಾರ್ಥನೆ ಮಾಡುತ್ತಾ ಇದ್ದೇವೆ. ನಾನು ಅದಷ್ಟೂ ದೇವರ ವಾಕ್ಯದ ಮೂಲಕ ಆಲೋಚನೆಕೊಟ್ಟು ಬುದ್ಧಿವಾದ ಹೇಳಿದೆನು. ಅವರಿಬ್ಬರಲ್ಲೂ ಮಾನಸಾಂತರ ಕಾಣಲಿಲ್ಲ. ಕೊನೆಗೆ ನನ್ನ ಬಳಿಯಿಂದ

ನಾನು ಬಹಳವಾಗಿ ಕುಗ್ಗಿಹೋಗಿದ್ದೇನೆ; ಯೆಹೋವನೇ, ನಿನ್ನ ವಾಕ್ಯಾನುಸಾರವಾಗಿ ನನ್ನನ್ನು ಚೈತನ್ಯಗೊಳಿಸು (ಕೀರ್ತ. 119:107).

ಬೇಸರದಿಂದ ಹೊರಟುಹೋದರು. ಕೆಲವೇ ಕೆಲವು ದಿವಸಗಳಲ್ಲಿ ನನಗೆ ಒಂದು ವಿಷಯಗೊತ್ತಾಯಿತು. ಈ ಸ್ತ್ರೀ ಯಾರೊಟ್ಟಿಗೋ ಓಡಿ ಹೋದಳು. ಈ ಸಹೋದರ ಮಾನಸಿಕ ರೋಗಿಯಾಗಿದ್ದಾನೆ. ಹೀಗೆ ಅನೇಕ ಘಟನೆಗಳ ಬಗ್ಗೆ ನಿಮಗೆ ವಿವರಿಸಬಹುದು. ಒಬ್ಬ ಹುಡುಗ ಮನೆ ಹತ್ತಿರದ ಮದುವೆಯಾಗಿದ್ದ ಹೆಂಗಸನ್ನು ಪ್ರೀತಿಸುತ್ತಿದ್ದ ಅವಳನ್ನೂ ಹೊಂದಿಕೊಳ್ಳಲಿಲ್ಲ. 40 ದಿವಸ ಉಪವಾಸ ಪ್ರಾರ್ಥನೆ ಮಾಡಿದ ಆ ಹೆಂಗಸನ್ನು ಯಾವಾಗಲೂ ಪೀಡಿಸುತ್ತಿದ್ದ ದೇವರು ಅವನಿಗೆ ಉತ್ತರ ಕೊಡಲೇ ಇಲ್ಲ. ಯಾಕೆಂದರೆ ಇದು ತಪ್ಪಾದ ಉಪವಾಸ ಪ್ರಾರ್ಥನೆಯಾಗಿತು. ಕೊನೆಗೆ ಕುಡುಕನಾಗಿ ಮಾರ್ಪಟ್ಟ ಇನ್ನೊಂದು ಸಹೋದರನ ಬಗ್ಗೆ ಚೆನ್ನಾಗಿ ಗೊತ್ತಿದೆ. ಅವನಿಗೆ ಒಳ್ಳೇ ವ್ಯವಹಾರ ಇದೆ. ಒಳ್ಳೆ ಆದಾಯವಿದೆ. ಹೆಂಡತಿ ಮಕ್ಕಳು ಇದ್ದಾರೆ. ಆದರೆ ಈತನು ಇನ್ನೊಂದು ಹೆಂಗಸಿನೊಂದಿಗೆ ಅಕ್ರಮಸಂಬಂಧ ಬೆಳೆಸಿದ್ದ ಈಕೆಯೊಟ್ಟಿಗೆ ಮದುವೆಯಾಗುವುದಕ್ಕಾಗಿ ಯಾವಾಗಲ ಉಪವಾಸಮಾಡುತ್ತಾ ಇದ್ದ ಒಂದು ದಿವಸ ಪ್ರಾರ್ಥಿಸಿಕೊಳ್ಳಲು ನನ್ನ ಬಳಿಗೂ ಬಂದಿದ ನಾನು ದೇವರ ವಾಕ್ಯದ ಮೂಲಕವಾಗಿ ಮದುವೆಯ ಪವಿತ್ರ ಸಂಬಂಧದ ಕುರಿತಾಗಿ ವಿವರಿಸಿದೆ. **"ಸೆರೆಯವರ ಸಂಗಡ ನೀವು ಜೊತೆ ಸೆರೆಯವರೆಂದು ಭಾವಿಸಿಕೊಂಡು ಅವರನ್ನು ಜ್ಞಾಪಕಮಾಡಿಕೊಳ್ಳಿರಿ. ನಿಮಗೂ ಅನ್ಯಾಯಸಂಭವಿಸೀತೆಂದು ತಿಳಿದು ಅನ್ಯಾಯ ಅನುಭವಿಸುವವರನ್ನು ನೆನಸಿರಿ. ದಾಂಪತ್ಯವು ಮಾನ್ಯವಾದದ್ದೆಂದು ಎಲ್ಲರೂ ಎಣಿಸಬೇಕು; ಗಂಡಹೆಂಡರ ಸಂಬಂಧವು ನಿಷ್ಕಲಂಕವಾಗಿರಬೇಕು. ಜಾರರಿಗೂ ವ್ಯಭಿಚಾರಿಗಳಿಗೂ ದೇವರು ನ್ಯಾಯತೀರಿಸುವನೆಂದು ತಿಳುಕೊಳ್ಳಿರಿ"** (ಇಬ್ರಿ. 13:3–4).

ಮುಂದುವರೆಯುವದು.......

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

---

## ಡಿಜಿಎಮ್ ಬೇತೇಲ್ ಅಂಕಣ

- **ಡಿಸೆಂಬರ್ 11–15 ರ ವರೆಗೆ ಡಿಜಿಎಂ ಬೇತೇಲ್ ಚರ್ಚ್ ಶಂಕರಪುರದಲ್ಲಿ 5 ದಿವಸದ ಪವರ್ ಕಾನ್ಫರೆನ್ಸ್ ಕೂಟವು ಕರ್ತನ ಕೃಪೆಯಿಂದ ಹಾಗೂ ನಿಮ್ಮೆಲ್ಲರ ಪ್ರಾರ್ಥನೆಯಿಂದ ಒಳ್ಳೆಯ ರೀತಿಯಲ್ಲಿ ನಡೆಯಿತು. ಈ ಕೂಟದಲ್ಲಿ ಅನೇಕ ದೇವ ಸೇವಕರು ಬಂದು ವಾಕ್ಯ ಸಂದೇಶವನ್ನು ನೀಡಿದರು ಮತ್ತು ಅನೇಕರು ಭಾಗವಹಿಸಿ ದೇವರಿಂದ ಆಶೀರ್ವಾದವನ್ನು, ಬಿಡುಗಡೆಯನ್ನು, ಸ್ವಸ್ಥತೆಯನ್ನು ಹೊಂದಿಕೊಂಡರು.**
- **2–22 ಜನವರಿ 2013ರ ವರೆಗೆ 21 ದಿವಸದ ಉಪವಾಸ ಕೂಟವನ್ನು ಡಿಜಿಎಂ ಬೇತೇಲ್ ಚರ್ಚ್ ಶಂಕರಪುರದಲ್ಲಿ ಏರ್ಪಡಿಸಲಾಗಿದೆ.**
- **ಮೇ 2013ರಲ್ಲಿ 5 ದಿವಸದ ಸ್ಕೂಲ್ ಆಫ್ ವರ್‌ಶಿಪ್ ಡಿಜಿಎಂ ಬೇತೇಲ್ ಚರ್ಚ್ ಶಂಕರಪುರದಲ್ಲಿ ನಡೆಸಲ್ಪಡುವುದು. ಇದರಲ್ಲಿ ಭಾಗವಹಿಸಲಿಚ್ಛಿಸುವವರು ಶೀಘ್ರವಾಗಿ ತಮ್ಮ ಹೆಸರುಗಳನ್ನು ನೊಂದಾಯಿಸಬೇಕಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇವೆ. ಇದನ್ನು ನಡೆಸಿಕೊಡುವವರು ಪಾ। ಜಯಶೀಲನ್ ಹಾಗೂ ತಂಡದವರು. (11 X 24 ದಿವಸ ನಿರಂತರ ಆರಾಧನೆ ಮಾಡಿ ಗಿನ್ನಿಸಿ ದಾಖಲೆಗೊಂಡ ಸೇವಕರು.)**

ನಿನ್ನ ನುಡಿಗಳು ನನ್ನ ನಾಲಿಗೆಗೆ ಎಷ್ಟೋ ರುಚಿಯಾಗಿವೆ; ಅವು ನನ್ನ ಬಾಯಿಗೆ ಜೇನುತುಪ್ಪಕ್ಕಿಂತಲೂ ಸಿಹಿಯಾಗಿವೆ (ಕೀರ್ತ. 119:103).

# ಪಾಟಿಂ ಗಾಂವಾಕ್

ಕಳೆದ ಸಂಚಿಕೆಯಿಂದ ಮುಂದುವರಿದಿದೆ.

ಲಾಬಾನಾ ಸಂಗಿಂ ಜಿಯೆತಾನಾ ಜಾಕೊಬಾಲಾಗಿಂ ಜಾಯ್ತಿ ಗ್ರೇಸ್ತ್‌ಕಾಯ್ ಆಯ್ಲಿ ತೊ ಎಕ್ ವ್ಹಡ್ಲೊ ಕುಳ್ವಾರ್ ಜಾಲೊ. ಉಪ್ರಾಂತ್ ಸರ್ವೆಸ್ಪರ್ ದೇವಾಚ್ಯಾ ಹುಕ್ಮೆ ಪರ್ಮಾಣೆಂ ಆಪ್ಲ್ಯಾ ಬಾಪಯ್ಯ್ನಿ ವಸ್ತಿ ಕರ್ಚ್ಯಾ ಗಾಂವಾಕ್ ಪಾಟಿಂ ಪರ್ತಾಲೊ. ಲಾಬಾನಾಚೆ ಗೈರ್ ಹಾಜ್ರೆಂತ್ ಆಪ್ಲ್ಯಾ ಬಾಯ್ಲಾಂಕ್, ಭುರ್ಗ್ಯಾಂಕ್, ಚಾಕ್ರಾಂಕ್, ಗೊರ್ವಾಂಕ್, ಬಕ್ರ್ಯಾಂಕ್ ಆನಿಂ ಕರ್ಯಾಂಕ್ ಘೇವ್ನ್ ಕಾನಾನಾಕ್ ಭಾಯ್ರ್‌ಸರ್ನ್ ಗೆಲೊ.

ಜಾಕೊಬ್ ಪಳೊನ್ ಗೆಲ್ಲಿ ಖಬರ್ ಆಯ್ಕೊನ್ ಲಾಬಾನಾಕ್ ಮಸ್ತ್ ಬೆಜಾರ್ ಜಾಲೆಂ. ಜಾಕೊಬ್ ಆಪ್ಲ್ಯಾ ಸಾಂಗಾತಾಚ್ಚ್ ಆಸಾಜಾಯ್ ಮ್ಹುಣ್ ತೊ ಆಶೆತಾಲೊ. ಲಾಬಾನಾನ್ ಆಪ್ಲ್ಯಾ ಮನ್ಶ್ಯಾಂಕ್ ಘೇವ್ನ್ ಜಾಕೊಬಾಚಿ ಪಾಟ್ ಧರುಂಕ್ ಪಾವ್ಲಾಂ ಕಾಡ್ಲಿಂ ಪುಣ್ ಸ್ವಪ್ಣಾಂತ್ ತಾಕಾ ಸರ್ವೆಸ್ಪರ್ ದೇವಾನ್ "ಜಾಕೊಬಾಕ್ ಕಿತೆಂಚ್ಚ್ ವಾಯ್ಟ್ ಕರ್ನಾಕಾ" ಮ್ಹುಣ್ ತಾಕಿತ್ ದಿಲಿ.

ಲಾಬಾನಾನ್ ಗಿಲ್ಯಾದ್ ದೊಂಗ್ರಾಚೇರ್ ಜಾಕೊಬಾಚಿ ಪಾಟ್ ಧರ್ಲಿ ಥಂಯ್ಸರ್ ಲಾಬಾನಾನ್ ಆಪ್ಲ್ಯಾ ಧುವಾಂಕ್ ಆನಿಂ ನಾತ್ರಾಂಕ್ ಸಾಂಗಾನಾಸ್ತಾನಾ ಆಪವ್ನ್ ವ್ಹೆಲ್ಲ್ಯಾಕ್ ಜಾಕೊಬಾಲಾಗಿಂ ಬೆಜಾರಾಯ್ ಉಚಾರ್ಲಿ. ಪುಣ್ ಸರ್ವೆಸ್ಪರ್ ದೇವಾಚ್ಯಾ ಚತ್ರಾಯೆಚೊ ಉಗ್ಡಾಸ್ ಆಸಲ್ಲ್ಯಾನ್ ತಾಣೆಂ ಜಾಕೊಬಾಕ್ ಕಸಲ್ಲೆಂಚ್ ವಾಯ್ಟ್ ಕೆಲೆಂನಾ. ಉಪ್ರಾಂತ್ ತಾಣಿಂ ಎಕಾಮೆಕಾ ವಾಯ್ಟ್ ಕರ್ಚೆನಾಂವ್ ಮ್ಹಳ್ಳಿ ಭಾಸವ್ಣಿ ಘೆತಚ್ "ಸರ್ವೆಸ್ಪರ್ ದೇವ್ ಆಮ್ಚೆರ್ ದೊಳೆ ದವ್ರುನ್ ಆಸಾ" ಮ್ಹಳ್ಳ್ಯಾ ಗವಾಯೆ ಖಾತಿರ್ ತಾಣಿಂ ಥಂಯ್ಸರ್ ಎಕ್ ಫಾತ್ರಾ ಖಾಂಬೊ ಉಬಾರ್ಲೊ.

ದುಸ್ರ್ಯಾ ದಿಸಾ ಸಕಾಳಿಂ ವೆಳಾರ್ ಲಾಬಾನಾನ್ ಆಪ್ಲ್ಯಾ ಧುವಾಂಕ್ ಆನಿಂ ನಾತ್ರಾಂಕ್ ಪಟ್ಲುನ್ ಧರುನ್ ಉಮೊ ದೀವ್ನ್ ಆದೇವ್ಸ್ ಮಾಗೊನ್ ಪಾಟಿಂ ಆಪ್ಲ್ಯಾ ಗಾಂವಾಚಿ ವಾಟ್ ಧರ್ಲಿ. ಜಾಕೊಬ್ ಮುಕ್ಲಿ ವಾಟ್ ಚಮ್ಕಾತಾನಾ ಮ್ಹಾಲ್ಘಡ್ಯಾಚ್ಯಾ ಗಾಂವಾಂತ್ ಆಪ್ಲ್ಯಾ ವ್ಹಡ್ಲ್ಯಾ ಭಾವಾ ಎಸಾವಾಚಿ ಭಿರಾಂತ್ ಉಟ್ಲಿ. ಆನಿಂ ಎಸಾವ್ ಚಾರ್ಶಿಂ ಜಣಾಂ ಸಾಂಗಾತಾ ಜಾಕೊಬಾಕ್ ಮೆಳೊಂಕ್ ಎತಾ ಮ್ಹಳ್ಳಿ ಖಬರ್ ಜಾಕೊಬಾಕ್ ಮೆಳ್ಳಿಚ್ಚ್ ತಾಣೆಂ ಆಪ್ಲ್ಯಾ ಮನ್ಶ್ಯಾಮದೆಂ ದೋನ್ ವಾಂಟೆ ಕರುನ್ ಎಕಾ ಪಂಗ್ಡಾ ಸಾಂಗಾತಾ ಗೊರ್ವಾಂ, ಬಕ್ರೆ, ಕರಿಂ ಆನಿಂ ಇನಾಮಾಂ ಎಸಾವಾ ಖಾತಿರ್ ಧಾಡುನ್ ದಿಲಿಂ ಆನಿಂ ತೊ ಸರ್ವೆಸ್ಪರ್ ದೇವಾಲಾಗಿಂ ಮಾಗ್ಣೆಂ ಕರುಂಕ್ ಲಾಗ್ಲೊ.

**ಬರಯ್ಣಾರ್ : ಜೇಸುದಾಸ್**
**(ಡೇವಿಡ್ ಲುವಿಸ್ ತಲ್ಲುರ್)**

---

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | |
|---|---|
| ತಿಂಗಳಿಗೊಮ್ಮೆ | ರೂ. 500/– |
| ಮೂರು ತಿಂಗಳಿಗೊಮ್ಮೆ | ರೂ. 2000/– |
| ಆರು ತಿಂಗಳಿಗೊಮ್ಮೆ | ರೂ. 6000/– |
| ವರ್ಷಕ್ಕೊಮ್ಮೆ | ರೂ. 8000/– |

**ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.**

ನಿನ್ನ ಸತ್ಯತೆಯು ತಲತಲಾಂತರಕ್ಕೂ ಇರುವದು. ನೀನು ಭೂಮಿಯನ್ನು ಸ್ಥಾಪಿಸಿರುತ್ತೀ; ಅದು ಕದಲುವದಿಲ್ಲ (ಕೀರ್ತ. 119:90).

# ಸ್ಥಳೀಯ ಮತ್ತು ವಿದೇಶ ಸುದ್ದಿ

- ಅಂತರಿಕ್ಷದಿಂದ ಮರಳಿ ಬಂದಳು ಸುನೀತಾ ಭಾರತೀಯ ಸಂಜಾತೆ ಅಮೆರಿಕದ ಗಗನಯಾತ್ರಿ ಸುನೀತಾ ವಿಲಿಯಮ್ಸ್ ತಮ್ಮ ಎರಡನೇ ಬಾಹ್ಯಾಕಾಶಯಾನವನ್ನು ಯಶಸ್ವಿಯಾಗಿ ಮುಗಿಸಿದ್ದಾರೆ. ಬರೋಬ್ಬರಿ 4 ತಿಂಗಳ (127 ದಿನಗಳು) ಅಂತರಿಕ್ಷಯಾತ್ರೆ ಮುಗಿಸಿ ಅವರು ಸುರಕ್ಷಿತವಾಗಿ ಭೂಮಿಗೆ ಮರಳಿದ್ದಾರೆ.
- ಆಗ್ನೇಯ ಏಷ್ಯಾ ರಾಷ್ಟ್ರಗಳ ಒಕ್ಕೂಟ (ಆಸಿಯಾನ್) ಜತೆ ಸೇವಾ ಮತ್ತು ಹೂಡಿಕೆಗೆ ಸಂಬಂಧಿಸಿದಂತೆ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲು ಭಾರತ ಸಿದ್ಧವಿದೆ ಎಂದು ಪ್ರಧಾನಿ ಮನಮೋಹನ್ ಸಿಂಗ್ ಘೋಷಿಸಿದ್ದಾರೆ.
- ಕದನ ವಿರಾಮದ ಪ್ರಯತ್ನಗಳ ನಡುವೆಯೂ ಗಾಜಾ ಪ್ರದೇಶದ ಮೇಲೆ ಇಸ್ರೇಲ್ ವೈಮಾನಿಕ ದಾಳಿ ಮುಂದುವರಿದಿದ್ದು ದಾಳಿಗೆ ಮಂದಿ ಪ್ಯಾಲೆಸ್ತೀನಿಯರು ಬಲಿಯಾಗಿದ್ದಾರೆ.
- ತಮಿಳುನಾಡಿಗೆ ನಿತ್ಯ ಸಾವಿರ ಕ್ಯೂಸೆಕ್ ನೀರು : ಸಿಆರ್ಎ ಮುಂಬರುವ ಹದಿನೈದು ದಿನಗಳ ಕಾಲ ನಿತ್ಯ ಸುಮಾರು ಎರಡು ಸಾವಿರ ಕ್ಯೂಸೆಕ್ ಕಾವೇರಿ ನೀರನ್ನು ರಾಜ್ಯ ಸರಕಾರ ತಮಿಳುನಾಡಿಗೆ ಹರಿಸಬೇಕಿದೆ.
- 2014ಕ್ಕೆ ಕರ್ನಾಟಕ ವಿದ್ಯುತ್ ಸ್ವಾವಲಂಬಿ ರಾಜ್ಯ : ರಾಜ್ಯ 2014ಕ್ಕೆ ವಿದ್ಯುತ್ ಸ್ವಾವಲಂಬಿಯಾಗಲಿದ್ದು, ಅದಕ್ಕೆ ಪೂರಕವಾದ ನಾನಾ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಇಂಧನ ಸಚಿವೆ, ಶೋಭಾ ಕರಂದ್ಲಾಜೆ ಹೇಳಿದರು.
- ಪ್ಲಾಸ್ಟಿಕ್ ಮಾರಾಟ ಮಾಡಿದರೆ ದಂಡ : ದ.ಕ. ಜಿಲ್ಲೆಯಲ್ಲಿ ಪ್ಲಾಸ್ಟಿಕ್ ಕ್ಯಾರಿಬ್ಯಾಗ್ ಬಳಕೆ ನಿಷೇಧಿಸಲಾಗಿದ್ದು, ವ್ಯಾಪಾರಸ್ಥರ ವಿರುದ್ಧ 100ರೂ. ದಂಡ ವಿಧಿಸಲಾಗುವುದು ಎಂದು ದ.ಕ. ಜಿಲ್ಲಾಧಿಕಾರಿ ಡಾ. ಎನ್. ಎಸ್. ಚೆನ್ನಪ್ಪಗೌಡ ಹೇಳಿದ್ದಾರೆ.
- ಸ್ಯಾಂಡಿ ಪತ್ತೆ ಹಚ್ಚಿದ್ದು ಇಸ್ರೋ ಅಮೆರಿಕದ ನ್ಯೂಜೆರ್ಸಿ, ನ್ಯೂಯಾರ್ಕ್ ನಗರಗಳನ್ನು ಸರ್ವನಾಶ ಮಾಡಿರುವ ಭೀಕರ ಸ್ಯಾಂಡಿ ಚಂಡಮಾರುತವನ್ನು ಮೊದಲು ಪತ್ತೆ ಹಚ್ಚಿದ್ದು ಭಾರತದ ಬಾಹ್ಯಾಕಾಶ ಸಂಶೋಧನ ಕೇಂದ್ರವಾದ ಇಸ್ರೋ.

## ವಿಶೇಷ ಪ್ರಾರ್ಥನೆ :

ಪ್ರತಿ ಶನಿವಾರ ಮಧ್ಯಾಹ್ನ 4–00ರಿಂದ 6–00 ಗಂಟೆಯವರೆಗೆ ಸ್ವಸ್ಥತೆಯ ಹಾಗೂ ಬಿಡುಗಡೆಯ ಆರಾಧನೆಯನ್ನು ಸಭಾಪಾಲಕರಾದ **ಸುನಿಲ್ ಜಾನ್ ಡಿ'ಸೋಜಾ** ಹಾಗೂ ತಂಡದವರ ನೇತೃತ್ವದಲ್ಲಿ ಡಿಜಿಎಮ್ ಬೇತೇಲ್ ಚರ್ಚ್ ಯೇಸುಪುರ, ಶಂಕರಪುರದಲ್ಲಿ ನಡೆಯುತ್ತಿದೆ. ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಆದರದ ಸ್ವಾಗತ. ರೋಗಿಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸಲಾಗುವುದು. ಬನ್ನಿರಿ ಯೇಸುಕ್ರಿಸ್ತನು ಮಾಡುವ ಅದ್ಭುತಗಳನ್ನು ಹೊಂದಿಕೊಳ್ಳಿರಿ.

**"ದೆವ್ವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು"** (ಮತ್ತಾ. 8:16).

*ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :*

**9902334941, 9964070654, 9740985802**

ಯೆಹೋವನ ಹೆಸರಿನಲ್ಲಿ ಒಳಗೆ ಬರುವವನಿಗೆ ಆಶೀರ್ವಾದ; ಯೆಹೋವನ ಮಂದಿರದಲ್ಲಿರುವ ನಾವು ನಿಮ್ಮನ್ನು ಆಶೀರ್ವದಿಸುತ್ತೇವೆ (ಕೀರ್ತ. 118: 26).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: (0820) 2589070, 200 2781
E-mial: dgmofficial@gmail.com

## ತಿಳುವಳಿಕೆಯ ಸ್ವರ

# ಹಳೆಯ ಒಡಂಬಡಿಕೆಯ ಪುಸ್ತಕಗಳ ಸಂಗ್ರಹ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

**"ನನ್ನ ಕಣ್ಣು ತೆರೆ, ಆಗ ನಿನ್ನ ಧರ್ಮಶಾಸ್ತ್ರದ ಅದ್ಭುತಗಳನ್ನು ಕಂಡುಕೊಳ್ಳುವೆನು"** (ಕೀರ್ತ. 119:18). ಸತ್ಯವೇದವನ್ನು ಓದುವಾಗಲೆಲ್ಲಾ ಇದು ನಿನ್ನ ಪ್ರಾರ್ಥನೆಯಾಗಿರಲಿ; ಯಾಕಂದರೆ ಈ ಪುಸಕ್ತದಲ್ಲಿ ದೇವರ ಮನಸ್ಸು, ಮನುಷ್ಯನ ಸ್ಥಿತಿ, ರಕ್ಷಣೆಯ ಮಾರ್ಗ, ಪಾಪಿಗಳ ನಿತ್ಯ ಶಿಕ್ಷೆ, ವಿಶ್ವಾಸಿಗಳ ನಿತ್ಯ ಸಂತೋಷ ಬರೆದಿರುತ್ತದೆ. ಇದರ ತತ್ವಗಳು ಶುದ್ಧವಾಗಿವೆ. ಇದರ ಕಟ್ಟಳೆಗಳು ಭದ್ರವಾಗಿವೆ. ಇದರ ಚರಿತ್ರೆಗಳು ಸತ್ಯವಾಗಿವೆ. ಇದರ ತೀರ್ಮಾನಗಳು ಸ್ಥಿರವಾಗಿವೆ. ನೀನು ಜ್ಞಾನಿಯಂತೆ ಅದನ್ನು ಓದು. ರಕ್ಷಿಸಲ್ಪಡುವಂತೆ ಇದನ್ನು ಅನುಸರಿಸು. ಇದು ನಿನ್ನ ಮಾರ್ಗಕ್ಕೆ ಬೆಳಕು ಕೊಡುವ ದೀಪ. ತೃಪ್ತಿಪಡಿಸುವ ಆಹಾರ. ಇದು ನಿನ್ನನ್ನು ಸಂತೋಷಪಡಿಸಿ ಆದರಿಸುವ ಆಪ್ತ ಸ್ನೇಹಿತ. ನಾವಿಕನ ಚುಕ್ಕಾಣಿ. ಸೈನಿಕನ ಕತ್ತಿ, ಕ್ರೈಸ್ತರ ಮಾರ್ಗದರ್ಶಕ.

ಇಲ್ಲಿ ಪರದೈಸ ಸಿಕ್ಕುತ್ತದೆ. ಪರಲೋಕ ದ್ವಾರವು ತೆರೆದಿದೆ. ನರಕದ್ವಾರ ಗೋಚರವಾಗುತ್ತದೆ. ಇದರ ಮುಖ್ಯ ವಿಷಯ ಕ್ರಿಸ್ತನೇ. ನಮಗೆ ಒಳ್ಳೆಯದಾಗಬೇಕೆನ್ನುವುದೇ ಇದರ ಉದ್ದೇಶ. ಇದರ ಅಂತ್ಯ ದೇವರ ಮಹಿಮೆ. ಇದು ಐಶ್ವರ್ಯದ ಗಣಿ. ಉಲ್ಲಾಸದ ನದಿ. ಇದು ತನ್ನ ಪವಿತ್ರವಾದ ವಿಷಯಗಳನ್ನು ಕೆಡಿಸುವವನನ್ನು ಖಂಡಿಸುತ್ತದೆ. ಓದುವವರಿಗೆ ಫಲಕೊಡುವ ಪುಸ್ತಕ. ಮನುಷ್ಯರಿಗೆ ದೇವರನ್ನು ಪ್ರಕಟಿಸುವ ಪುಸ್ತಕ ಇದನ್ನು ಪ್ರಾರ್ಥನೆಯೊಂದಿಗೆ ಓದು. (ಆಯ್ದುದ್ದುರಾಜಪುತ್ರರ ಆಹಾರ).

ನಿನ್ನ ದ್ರವ್ಯ ಅಪರಿಮಿತ ಬೆಲೆಯುಳ್ಳದ್ದು. ನಿನ್ನ ವಾಕ್ಯವು ಕೃಪೆಯೂ ಸತ್ಯತೆಯೂ ಉಳ್ಳದ್ದು. ಪ್ರಾಯಸ್ಥರಿಗೆ ಆದರಣೆ ಕೊಡುವಂಥದ್ದು. ಯುವಕರಿಗೆ ಸ್ನೇಹಿತನಂತಿರುವುದು. ನಿನ್ನ ಪವಿತ್ರ ಪುಟಗಳೊಳಗೆ ಮನಸ್ಸನ್ನು ಸಮೃದ್ಧಿಗೊಳಿಸುವ ತಿಳುವಳಿಕೆಯೂ ಜ್ಞಾನವೂ ಖಚಿತವಾದ ಮಾರ್ಗದರ್ಶನವೂ ದಾರಿತಪ್ಪಿದರೆ ಉಂಟಾಗಬಹುದಾದ ಅಪಾಯದ ಎಚ್ಚರಿಕೆಯೂ ಬರೆಯಲ್ಪಟ್ಟಿದೆ. ನಿನ್ನ ನಿಬಂಧನೆಗಳನ್ನು ಚೆನ್ನಾಗಿ ಅಭ್ಯಾಸಿಸುವ ಮಗು ಸಂತೋಷದಿಂದ ಇರುವುದು. ನಿನ್ನ ಸುವಾರ್ತಾಘಂಟೆಯ ಸ್ವರವನ್ನು ಕೇಳುವ ದೇಶವು ಹರ್ಷಭರಿತವಾಗಿರುವುದು. ಭೂಮಿಯು ಅಳಿದುಹೋದರೂ ನಿನ್ನ ವಾಕ್ಯಕ್ಕೆ ವಿಧೇಯರಾಗಿ ಜೀವಿಸುವವರು ಮೂರರಷ್ಟು ಸಂತೋಷವುಳ್ಳವರಾಗಿ ನೆಲೆಗೊಳ್ಳುವರು. ಜೀವಿತದ ಮಾರ್ಗವನ್ನು ಅರ್ವತ್ತಾರು ಪುಸ್ತಕಗಳಲ್ಲಿ ಪ್ರಕಟಿಸಿದೆ.

ಮಾನವನ ಚರಿತ್ರೆಯ ಹಿನ್ನೆಲೆಯನ್ನು ಇಬ್ರಿಯ ಜನಾಂಗದ ಅರಸರ ಮತ್ತು ಪ್ರವಾದಿಗಳ ಚರಿತ್ರೆಯನ್ನು ಆತ್ಮಪ್ರೇರಿತರಾಗಿ ಯಾಜಕರೂ ಕವಿಗಳೂ ಮತ್ತು ರೈತರೂ ಬರೆದಿರುವರು.

**ಇತರರ ಅನಿಸಿಕೆಗಳು :**

1. ಸತ್ಯವೇದ ಇದನ್ನು ನೀನು ಎಷ್ಟು ಹೆಚ್ಚಾಗಿ ಧ್ಯಾನಿಸುತ್ತೀಯೋ ಅಷ್ಟು ಹೆಚ್ಚಾಗಿ ಪ್ರೀತಿಸುತ್ತೀ. ನೀನು ಎಷ್ಟು ಹೆಚ್ಚಾಗಿ ಪ್ರೀತಿಸುತ್ತೀಯೋ ಅಷ್ಟು ಹೆಚ್ಚಾಗಿ ಧ್ಯಾನಿಸುತ್ತೀ.
2. ಜ್ಞಾನಿಯಾಗುವಂತೆ ಸತ್ಯವೇದವನ್ನು ಅಭ್ಯಾಸಿಸು : ಸುರಕ್ಷಿತನಾಗಿರುವಂತೆ ನಂಬು; ಪವಿತ್ರ ಜೀವಿತವನ್ನು ನಡೆಸುವಂತೆ ಅನುಸರಿಸು.
3. ಸತ್ಯವೇದವನ್ನು ನಾನು ದೇವರ ವಾಕ್ಯವೆಂದು ಯಾಕೆ ನಂಬುತ್ತೇನೆ?

1. ಕ್ರಿಸ್ತನ ಸಾಕ್ಷಿಗಳು ವಿವರಿಸಲ್ಪಟ್ಟಿದೆ.
2. ಇದರಲ್ಲಿ ಬರೆಯಲ್ಪಟ್ಟ ವಿವರವುಳ್ಳ ಪ್ರವಾದನೆಗಳು ಪೂರ್ತಿಗೊಂಡಿದೆ ಮತ್ತು ನೆರವೇರುತ್ತಾ ಇದೆ.
3. ಮೂರು ವಿವಿಧ ಭಾಷೆಗಳಲ್ಲಿ 66 ಪುಸಕ್ತಗಳು ಬರೆಯಲ್ಪಟ್ಟಿದ್ದರೂ ಘನತರವಾದ ಹೊಂದಾಣಿಕೆ ಇದೆ.
4. ಸತ್ಯವೇದವನ್ನು ನಿರ್ನಾಮಗೊಳಿಸುವ ಪ್ರಯತ್ನಗಳು ವಿಫಲವಾಗಿದೆ.
5. ಸತ್ಯವೇದವನ್ನು ಓದಿದ ಸಹಸ್ರಾರು ಜನರು ಪರಿವರ್ತನೆ ಹೊಂದಿರುವರು.
6. ಸತ್ಯವೇದವು ಬತ್ತಿ ಹೋಗದ ತೊರೆಯಂತಿದೆ.
7. ಸತ್ಯವೇದದ ಮುಖಾಂತರ ದೇವರು ನಮ್ಮೊಂದಿಗೆ ಮಾತನಾಡುತ್ತಾನೆ. (ಆರಿಸಿದ್ದು ಭಾಷಾಂತರ).

**ಯೆಹೂದ್ಯರ ಹಬ್ಬಗಳು :–**

1) **ಪಸ್ಕಹಬ್ಬ :** ಮೊದಲನೇ ತಿಂಗಳ ಅಬೀಬ್ (ಏಪ್ರಿಲ್) ಹದಿನಾಲ್ಕನೇ ತಾರೀಖಿನಂದು ಐಗುಪ್ತ ದೇಶದಿಂದ ಬಿಡುಗಡೆಯಾದದ್ದನ್ನು ಜ್ಞಾಪಿಸಿಕೊಳ್ಳುವ ಹಬ್ಬ (ಯಾಜ. 23:5, ಅರಣ್ಯ. 9:3, ಮತ್ತಾ. 26:17, ಇಬ್ರಿ. 11:28).

2) **ಪಂಚಾಶತ್ತಮ ಹಬ್ಬ :** ಗೋಧಿಯ ಬೆಳೆಯ ಪ್ರಥಮ ಫಲದ ಕಡೇ ದಿನದಲ್ಲಿ ಮೂರನೆಯ ತಿಂಗಳಿನ

ಯೆಹೋವನ ಬಲಗೈ ಉನ್ನತವಾಗಿದೆ; ಯೆಹೋವನ ಬಲಗೈ ಪರಾಕ್ರಮವನ್ನು ನಡಿಸುತ್ತದೆ
(ಕೀರ್ತ. 118:16).

ಸಿವಾನ್ (ಜೂನ್) ತಿಂಗಳ ಆರನೇಯ ದಿನದಲ್ಲಿ ದೇವರು ಕೊಟ್ಟ ನಿಯಮಗಳನ್ನು ಜ್ಞಾಪಿಸಿಕೊಳ್ಳುವ ಹಬ್ಬ (ವಿಮೋ. 23:16, ಯಾಜ. 23:10, ಅ.ಕೃ. 20:16).

3) **ತುತ್ತೂರಿಗಳ ಹಬ್ಬ :** ಏಳನೇಯ ತಿಂಗಳಿನ ಏತಾನಿಮ್ (ಅಕ್ಟೋಬರ್) ಮೊದಲನೇ ದಿನದಲ್ಲಿ ಆಚರಿಸಲ್ಪಡುವುದು (ಯಾಜ. 23:24, ಅರಣ್ಯ. 29:1, ನೆಹೆ. 8:2).

4) **ಪರ್ಣ ಶಾಲೆಗಳ ಜಾತ್ರೆ :** ಏತಾನಿಮ್ (ಅಕ್ಟೋಬರ್) ತಿಂಗಳ ಹದಿನೈದನೆಯ ದಿನದಿಂದ ಇಪ್ಪತ್ತೆರಡನೆಯ ದಿನದವರೆಗೆ ಪ್ರಥಮ ಫಲದ ಉಪಕಾರ ಸ್ಮರಣೆಯ ದಿನ. ಈ ದಿವಸಗಳಲ್ಲಿ ಜನರು ತಮ್ಮ ಅರಣ್ಯ ಪ್ರಯಾಣವನ್ನು ನೆನಸುವುದಕೋಸ್ಕರ ಪರ್ಣಶಾಲೆಗಳಲ್ಲಿ ವಾಸಿಸುವರು. (ಯಾಜ. 23:34; 2 ಪೂರ್ವ. 8:13, ಎಜ್ರ. 3:4, ಯೋಹಾ. 7:2).

5) **ಪ್ರತಿಷ್ಠೆಯ ಹಬ್ಬ :** ಒಂಭತ್ತನೆಯ ತಿಂಗಳ ಕಿಸ್ಲೆವ್ (ಡಿಸೆಂಬರ್) ಮಾಸದ ಇಪ್ಪತ್ತೈದನೆಯ ದಿನದಂದು ಸುರಿಯಾನರಿಂದ ಹಾಳುಗೆಡವಲ್ಪಟ್ಟ ದೇವಾಲಯವನ್ನು ಪುನರ್ಜೀವನಗೊಳಿಸಿದ ದಿನವನ್ನು ಜ್ಞಾಪಿಸುವ ದಿನ (ಯೋಹಾ. 10:22).

6) **ಸರ್ವದೋಷ ಪರಿಹಾರಕ ದಿನ :** ಏಳನೆಯ ತಿಂಗಳಿನ ಏತಾನಿಮ್ (ಅಕ್ಟೋಬರ್) ಹತ್ತನೆಯ ದಿನದಲ್ಲಿ ಆಚರಿಸುವುದು. ಉಪವಾಸವಿದ್ದು ಯೆಹೋವನಿಗೆ ಹೋಮವನ್ನು ಅರ್ಪಿಸುವ ದಿನ (ಯಾಜ. 23:26).

7) **ಪೂರೀಮ್ ಹಬ್ಬ :** ಹನ್ನೆರಡನೆಯ ತಿಂಗಳಿನ ಪಾಲ್ಗುಣ (ಮಾರ್ಚ್) ಮಾಸದ ಹದಿನಾಲ್ಕನೆಯ ಮತ್ತು ಹದಿನೈದನೆಯ ದಿವಸಗಳಂದು ಯೆಹೂದ್ಯರನ್ನು ನಾಶಪಡಿಸಲು ಹೊರಡಿಸಿದ ರಾಯಸವನ್ನು ರದ್ದುಪಡಿಸಿದನ್ನು ನೆನಸಿಕೊಳ್ಳುವ ಹಬ್ಬ (ಎಸ್ತೇ. 9:17–22–26).

**ಯೆಹೋವ ದೇವರ ಸಂಯುಕ್ತ ನಾಮಗಳು**

1. ಯೆಹೋವ – ಹೊಸಿನು ನಿರ್ಮಾಣಿಕನಾದ ಯೆಹೋವನು (ಕೀರ್ತ. 95:6).
2. ಯೆಹೋವ – ಯೀರೆ ಯೆಹೋವನು ಒದಗಿಸುವನು (ಆದಿ. 22:14).
3. ಯೆಹೋವ ರೊಫೆಕ ಯೆಹೋವನೆಂಬ ನಾನೇ ನಿಮಗೆ ಆರೋಗ್ಯದಾಯಕನು ವಿಮೋ. 15:26.
4. ಯೆಹೋವ – ನಿಸ್ಸಿ ಯೆಹೋವನೇ ನಮ್ಮ ಜಯ ಧ್ವಜ ವಿಮೋ. 17:15.
5. ಯೆಹೋವ ಮೆಕದಿಷ್ಕೆಮ್ ನಾನು ನಿಮ್ಮನ್ನು ಪರಿಶುದ್ಧ ಜನವಾಗುವಂತೆ ಮಾಡುವ ಯೆಹೋವನು (ವಿಮೋ. 31:13, ಯಾಜ. 20:8, 21:8, 22:9, 16:32, ಯೆಹೆ. 20:12).
6. ಯೆಹೋವ ಎಲೋಹೀನು ನಮ್ಮ ಯೆಹೋವ ದೇವರು (ಕೀರ್ತ. 99:5–8–9).

ಮುಂದುವರಿಯುವುದು....

**ಸಹೋ। ಎಲಿಜಬೆತ್ ಡಿ'ಸೋಜಾ**

## ಯೇಸುಕ್ರಿಸ್ತನ ಹೆಸರು ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದದ್ದು

1. ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಆ ಹೆಸರಿನಿಂದಲೇ (ಯೇಸುಕ್ರಿಸ್ತನ) ಹೊರತು ಬೇರೆ ಯಾವ ಹೆಸರಿನಿಂದಲೂ ರಕ್ಷಣೆಯಾಗುವದಿಲ್ಲ (ಅ.ಕೃ. 4:12).
2. ಕರ್ತನಾದ ಯೇಸುಕ್ರಿಸ್ತನ ಮೇಲೆ ನಂಬಿಕೆಯಿಡು, ಆಗ ನೀನೂ ರಕ್ಷಣೆ ಹೊಂದುವಿ. ನಿನ್ನ ಮನೆಯವರೂ ರಕ್ಷಣೆ ಹೊಂದುವರು (ಅ.ಕೃ. 16:31).
3. ಕರ್ತನ (ಯೇಸುಕ್ರಿಸ್ತನ) ಹೆಸರನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆಯಾಗುವದೆಂದು ದೇವರು ಹೇಳುತ್ತಾನೆ (ಅ.ಕೃ. 2:21).
4. ದೇವರು ಆತನನ್ನು (ಯೇಸುಕ್ರಿಸ್ತನನ್ನು) ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದದರಿಂದ ಸ್ವರ್ಗ ಮರ್ತ್ಯ ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸುಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು (ಫಿಲಿ. 2:9–11).
5. ನೀವು ನನ್ನ (ಯೇಸುಕ್ರಿಸ್ತನ) ಹೆಸರಿನಲ್ಲಿ ಏನೇನು ಬೇಡಿಕೊಳ್ಳುವಿರೋ, ಅದನ್ನು ನೆರವೇರಿಸುವೆನು. (ಯೋಹಾ. 14:13).

ನಾನು ಸಾಯುವುದಿಲ್ಲ; ಜೀವದಿಂದಿದ್ದು ಯಾಹುವಿನ ಕ್ರಿಯೆಗಳನ್ನು ಸಾರುವೆನು (ಕೀರ್ತ. 118:17).

# ರೂತಳು

## ಯೇಸುಕ್ರಿಸ್ತನ ಅತಿಶಯವಾದ ನಾಮದಲ್ಲಿ ಪ್ರಿಯವಾಚಕರೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು.

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಮಹಿಳೆಯರ ಸ್ವರ

1. **ದೇವರನ್ನು ಯಾವಾಗಲೂ ಸ್ತುತಿಸಬೇಕು :** ದೇವರನ್ನು ಯಾಕೆ ಸ್ತುತಿಸಬೇಕು?

1) ಸ್ತುತಿಯು ಆತನಿಗೆ ಪ್ರಿಯವಾದದ್ದು (ಕೀರ್ತ. 69:30–31).

2) ಆತನ ಕೃಪೆಗಾಗಿ ಸ್ತುತಿಸಬೇಕು (ಕೀರ್ತ. 107:21).

3) ಆತನ ಮಹತ್ಕಾರ್ಯಗಳಿಗಾಗಿ ಆತನನ್ನು ಸ್ತುತಿಸಬೇಕು (ಕೀರ್ತ. 150:2).

4) ಸ್ತುತಿಯು ದೇವರಿಗೆ ಸಿಂಹಾಸನವನ್ನು ಸಿದ್ಧಮಾಡುತ್ತದೆ (ಕೀರ್ತ. 22:3).

5) ಆತನ ದೊಡ್ಡತನಕ್ಕಾಗಿ ಸ್ತುತಿಸಬೇಕು (ಕೀರ್ತ. 96:4).

6) ಆತನು ಮಹೋನ್ನತನಾಗಿರುವುದರಿಂದ (ಕೀರ್ತ. 48:1).

7) ಕರ್ತನನ್ನು ಗೌರವಿಸುವುದಕ್ಕಾಗಿ ಸ್ತುತಿಸಬೇಕು (ಕೀರ್ತ.

8) ಶತ್ರುಗಳು ಸಂತೋಷಿಸುವುದಕ್ಕೆ ಅವಕಾಶಕೊಡದೆ ದೇವರು ಉದ್ಧರಿಸಿದ್ದರಿಂದ (ಕೀರ್ತ. 30:1).

9) ಮೊರೆಯನ್ನು ಕೇಳಿ ಸ್ವಸ್ಥಪಡಿಸಿದ್ದರಿಂದ (ಕೀರ್ತ. 30:2).

10) ಸಮಾಧಿಯಲ್ಲಿ ಸೇರಗೊಡದೆ ಬದುಕಿಸಿದ್ದಕ್ಕಾಗಿ ಸ್ತುತಿಸಬೇಕು (ಕೀರ್ತ. 30:3).

11) ಗೋಳಾಟವನ್ನು ತಪ್ಪಿಸಿ ಸಂತೋಷದಿಂದ ಕುಣಿದಾಡುವಂತೆ ಮಾಡಿದ್ದಕ್ಕಾಗಿ ಸ್ತುತಿಸಬೇಕು (ಕೀರ್ತ. 30:11).

12) ಗೋಣಿತಟ್ಟನ್ನು ತೆಗೆದುಬಿಟ್ಟು ಹರ್ಷ ವಸ್ತ್ರವನ್ನು ಧಾರಣೆ ಮಾಡಿದ್ದಕ್ಕಾಗಿ ಸ್ತುತಿಸಬೇಕು.

13) ದೇವರು ಮಾಡಿದ ಉಪಕಾರಗಳಿಗಾಗಿ (ಕೀರ್ತ. 103:1–3).

14) ಸತ್ಯ ಪ್ರಮಾಣಿಕತೆಗಳನ್ನು ಅನುಸರಿಸಿ ಆದಿ ಸಂಕಲ್ಪಗಳನ್ನು ನೆರವೇರಿಸುತ್ತಾ ಅದ್ಭುತಗಳನ್ನು ನಡೆಸಿದ ಕಾರಣ ಸ್ತುತಿಸಬೇಕು (ಯೆಶಾ. 25:1).

15) ನಾಶನದ ಗುಂಡಿಯೊಳಗಿಂದ ಮೇಲಕ್ಕೆತ್ತಿರುವುದಕ್ಕಾಗಿ ಸ್ತುತಿಸಬೇಕು (ಕೀರ್ತ. 40:1–3).

**2) ದೇವರ ಅನ್ಯೋನ್ಯತೆಯಲ್ಲಿರಬೇಕು:**

ನಾನ ರೀತಿ ದೇವರೊಂದಿಗೆ ಅನ್ಯೂನ್ಯತೆಯಲ್ಲಿರಬಹುದು

1. ಪರಿಶುದ್ಧ ಜೀವಿತದ ಮೂಲಕ
2. ಪ್ರಾರ್ಥನೆಯ ಮೂಲಕ
3. ಆಳವಾದ ದಾಹದ ಮೂಲಕ.

**1) ಪರಿಶುದ್ಧ ಜೀವಿತದ ಮೂಲಕ :** 1 ಪೇತ್ರ. 1:15–16 ದೇವರು ಹೇಳುತ್ತಾನೆ, ನಾನು ಪರಿಶುದ್ಧನಾಗಿರುವ ಪ್ರಕಾರ ನೀವು ಕೂಡ ಪರಿಶುದ್ಧರಾಗಿರಬೇಕು. ದೇವರ ಹೃದಯದ ಆಸೆ ಆತನ ಮಕ್ಕಳಾದ ನಾವು ಪರಿಶುದ್ಧ ಜೀವಿತವನ್ನು ಜೀವಿಸಬೇಕೆಂಬುದಾಗಿ ಹೇಗೆ ಪರಿಶುದ್ಧವಾಗಿ ಜೀವಿಸಬಹುದು.

1. ದೇವರ ವಾಕ್ಯದ ಮೂಲಕ (ಯೋಹಾ. 15:1–3).
2. ಯೇಸುವಿನ ಹೆಸರಿನ ಮೂಲಕ (1 ಕೊರಿ. 6:11).
3. ಪರಿಶುದ್ಧಾತ್ಮನ ಮೂಲಕ (1 ಕೊರಿ. 6:11, 2 ಥೆಸ. 2:13).
4. ಯೇಸುವಿನ ಪರಿಶುದ್ಧ ರಕ್ತದ ಮೂಲಕ (1 ಯೋಹಾ. 1:7).

**2) ಪ್ರಾರ್ಥನೆಯ ಮೂಲಕ :** ಪ್ರಾರ್ಥನೆ ಎಂಬುವಂಥದ್ದು ನಮ್ಮ ಮತ್ತು ದೇವರ ಪ್ರಾರ್ಥನೆ ಅನ್ಯೋನ್ಯತೆ ಸ್ಥಾಪಿಸುವಂತದ್ದಾಗಿದೆ. ಮಧ್ಯದಲ್ಲಿ ಅನ್ಯೋನ್ಯತೆ

ಈ ದಿನವು ಯೆಹೋವನಿಂದಲೇ ನೇಮಕವಾದದ್ದು; ಇದರಲ್ಲಿ ನಾವು ಉಲ್ಲಾಸದಿಂದ ಆನಂದಿಸೋಣ (ಕೀರ್ತ. 118:24).

ಸ್ಥಾಪಿಸುವಂತದ್ದಾಗಿದೆ. ಒಬ್ಬ ವ್ಯಕ್ತಿಯು ನಮಗೆ ಪರಿಚಿತನಾದ ಮೇಲೆ ಆ ವ್ಯಕ್ತಿಯೊಂದಿಗೆ ನಾವು ಅನ್ಯೋನ್ಯತೆ ಬೆಳೆಸದಿದ್ದರೆ ಒಂದಲ್ಲ ಒಂದು ದಿನ ಅನ್ಯೋನ್ಯತೆ ಮುಂದೆ ಹೋಗುತ್ತದೆ. ಅದೇ ರೀತಿ ದೇವರೊಂದಿಗೆ ಕೂಡ ನಾವು ಪ್ರತಿದಿನ ಅನ್ಯೋನ್ಯತೆ ಇರಿಸಲು ಒಂದು ಮಾರ್ಗ ಅದು ಪ್ರಾರ್ಥನೆಯಾಗಿದೆ.

3) **ಆಳವಾದ ದಾಹದ ಮೂಲಕ :** ಕೀರ್ತ.42:1–3, 63:1–4 ರಲ್ಲಿ ದಾವೀದನು ದೇವರ ಅನ್ಯೋನ್ಯತೆಯನ್ನು ಎಷ್ಟು ಬಯಸುತ್ತಿದ್ದ ಎಂದು ನಾವು ಕಾಣಬಹುದು. ಕೀರ್ತ. 84:10 ಇತರ ಸಹಸ್ತ್ರ ದಿನಗಳಿಗಿಂತಲೂ ದೇವರ ಸಮ್ಮುಖದಲ್ಲಿ ಕಳೆದ ಒಂದು ದಿನವು ಶ್ರೇಷ್ಠ ಎಂದು ದಾವೀದನು ಹೇಳುತ್ತಿದ್ದಾನೆ. ದಾವೀದನು ದೇವರ ಅನ್ಯೋನ್ಯತೆಯಲ್ಲಿ ನಡೆಯಲು ಆತನಲ್ಲಿದ್ದಂತ ದಾಹವೇ ಕಾರಣವಾಗಿತು. ಇಂದು ನನ್ನ ಮತ್ತು ನಿಮ್ಮ ಕುರಿತು ಏನು ನಮಗೆ ದಾಹ ಇದ್ದರೆ ಖಂಡಿತವಾಗಿ ದೇವರ ಅನ್ಯೋನ್ಯತೆಯಲ್ಲಿ ನಡೆಯಲು ಸಾಧ್ಯವಾಗುವುದು.

4) **ಆತನ ವಚನ ಪ್ರಕಾರ ಜೀವಿಸಬೇಕು :** ಯಾಕೋ. 1:22 ಹೇಳುತ್ತದೆ, ವಾಕ್ಯದ ಪ್ರಕಾರ ನಡೆಯುವವರಾಗಿರಿ ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ. ದೇವರ ಜೊತೆಯಲ್ಲಿ ನಡೆಯಬೇಕಾದರೆ ಆತನ ಅನ್ಯೋನ್ಯತೆ ಕಾಪಾಡಿಕೊಳ್ಳಬೇಕಾದರೆ ಇನ್ನೊಂದು ಮಾರ್ಗ ಆತನ ವಚನಗಳನ್ನು ಅರ್ಥಮಾಡಿಕೊಂಡು ಆ ವಚನಗಳ ಪ್ರಕಾರವಾಗಿ ಜೀವಿಸಬೇಕು. 1 ಯೋಹಾ. 5:3 ದೇವರ ಮೇಲಣ ಪ್ರೀತಿ ಏನೆಂದರೆ ಆತನ ಆಜ್ಞೆಗಳನ್ನು ಕೈಗೊಂಡು ನಡೆಯುವುದೇ ಆತನ ಆಜ್ಞೆಗಳು ಭಾರವಾದವುಗಳಲ್ಲ.

5) **ಆತನಿಗೆ ಮಹಿಮೆ ಸಲ್ಲಿಸಬೇಕು :** 1 ಕೊರಿ. 6:19–20 ದೇವರಿಂದ ದೊರಕಿ ನಿಮ್ಮೊಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆಂಬುದು ನಿಮಗೆ ತಿಳಿಯದೋ? ನೀವು ನಿಮ್ಮ ಸ್ವಂತ ಸೊತ್ತಲ್ಲ, ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು. ಆದಕಾರಣ ನಿಮ್ಮ ದೇಹದಲ್ಲಿ ದೇವರ ಪ್ರಭಾವವನ್ನು ಪ್ರಕಾಶಪಡಿಸಿರಿ. ನಮ್ಮ ಮಾತುಗಳ ಮೂಲಕ, ನಮ್ಮ ನಡೆಗಳ ಮೂಲಕ, ನಮ್ಮ ಜೀವಿತದ ಪ್ರತಿಯೊಂದು ಕಾರ್ಯಗಳ ಮೂಲಕ ದೇವರನ್ನು ಮಹಿಮೆಪಡಿಸಬೇಕು. 1 ಕೊರಿ. 10:31 ಹೀಗಿರಲಾಗಿ ನೀವು ಉಂಡರೂ ಕುಡಿದರೂ ಇನ್ನೇನೂ ಮಾಡಿದರೂ ಎಲ್ಲವನ್ನು ದೇವರ ಘನತೆಗಾಗಿ ಮಾಡಿರಿ.

6) **ಆತನು ಮಾಡಿದ ಉಪಕಾರಗಳ ಕುರಿತು ಯಾವಾಗಲೂ ಮಾತನಾಡಬೇಕು:** ನಾವು ನಮ್ಮ ಜೀವಿತದಲ್ಲಿ ನಮ್ಮ ಕುಟುಂಬದವರು, ಸ್ವಂತದವರು, ಸ್ನೇಹಿತರು ಮಾಡಿದ ಚಿಕ್ಕ ದೊಡ್ಡ ಉಪಕಾರಗಳ ಬಗ್ಗೆ ಯಾವಾಗಲೂ ಮಾತಾನಾಡುತ್ತೇವೆ ಆದರೆ ದೇವರ ಉಪಕಾರಗಳ ಬಗ್ಗೆ ಒಂದೂ ಮಾತನ್ನು ಆಡುವುದಿಲ್ಲ. ಲೂಕ. 17:11–17 ರಲ್ಲಿ 10 ಜನ ಕುಷ್ಠರೋಗಿಗಳನ್ನು ಯೇಸು ಗುಣಮಾಡಿದನು. ಅದರಲ್ಲಿ ಒಬ್ಬನು ಮಾತ್ರ ಉಪಕಾರ ಹೇಳಲು ಹಿಂತಿರುಗಿ ಬಂದನು. ಮೀಕ. 15:1–20 ರಲ್ಲಿ ಸಮಾಧಿಯಲ್ಲಿ ದೆವ್ವಹಿಡಿದು ವಾಸಮಾಡುತ್ತಿದ್ದಂತಹ ವ್ಯಕ್ತಿಗೆ ಯೇಸು ಸೌಖ್ಯ ಕೊಟ್ಟಾಗ ಆತನು ಯೇಸುವಿನ ಹಿಂದೆ ಬರುವಂತಹ ತನ್ನ ಹೃದಯದ ಆಸೆಯನ್ನು ಹೇಳಿದಾಗ ಯೇಸು ಏನು ಹೇಳಿದ ಎಂದು ನೋಡೋಣ. ಮಾರ್ಕ. 5:18–20 ಆ ದೆವ್ವ ಹಿಡಿದಿದ್ದವನು ನಾನು ನಿನ್ನ ಬಳಿಯಲ್ಲಿಯೇ ಇರುತ್ತೇನೆಂದು ಆತನನ್ನು ಬೇಡ ತೊಡಗಿದನು. ಆದರೆ ಆತನು ಅವನನ್ನು ಇರಗೊಡದೆ ಅವನಿಗೆ ನೀನು ನಿನ್ನ ಮನೆಗೂ ನಿನ್ನ ಜನರ ಬಳಿಗೂ ಹೋಗಿ ಸ್ವಾಮಿಯು ನಿನ್ನಲ್ಲಿ ಕರುಣೆಯಿಟ್ಟು ನಿನಗೆ ಎಂಥೆಂಥಾ ಉಪಕಾರಗಳನ್ನು ಮಾಡಿದ್ದಾನೋ ಅದನ್ನು ಹೇಳು ಅಂದನು. ಅವನು ಹೊರಟು ಹೋಗಿ ಯೇಸು ತನಗೆ ಮಾಡಿದ ಉಪಕಾರಗಳನ್ನು ದೆಕಪೋಲಿ ಎಂಬ ಸೀಮೆಯಲ್ಲಿ ಸಾರುವುದಕ್ಕೆ ಪ್ರಾರಂಭಿಸಿದನು. ಎಲ್ಲರೂ ಆಶ್ಚರ್ಯಪಟ್ಟರು.

ಕರ್ತನು ಚೀಯೋನಿನಿಂದ ಹೇರಳವಾಗಿ ಆಶೀರ್ವದಿಸಲಿ.

ಮುಂದುವರಿಯುವದು........

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**– ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

ಕ್ರಿಸ್ತ ಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ (ಫಿಲಿ. 2:5).

## ಮಕ್ಕಳ ಸ್ವರ

1. ರಾತ್ರಿಯ ಕಾಲ ಇಲ್ಲದ ನಗರ ಅಥವಾ ಪಟ್ಟಣ ಯಾವುದು?
2. ಬೇತೇಲಿನ ಗುಡ್ಡದ ಹುಡುಗರು “ಬೋಳು ಮಂಡೆಯವನೇ” ಎಂದು ಯಾರನ್ನು ಪರಿಹಾಸ್ಯಮಾಡಿದರು?
3. ಯೇಸುಕ್ರಿಸ್ತನ ವಂಶಾವಳಿಯಲ್ಲಿ ಬರುವ ಮೋವಾಬ್ ಸ್ತ್ರೀ ಯಾರು ?
4. ಯೆಶಾಯನು ಯಾರ ಮಗನು ಅಥವಾ ಯೆಶಾಯನ ತಂದೆ ಯಾರು ?
5. ಯೆರೆಮೀಯನ ಊರು ಯಾವುದು ಮತ್ತು ಆತನ ತಂದೆಯ ಹೆಸರೇನು?
6. ಯೆಹೆಜ್ಕೇಲನ ತಂದೆಯ ಹೆಸರೇನು? ಅಥವಾ ಯೆಹೆಜ್ಕೇಲನು ಯಾರ ಮಗನು?
7. ನೆಬೂಕದ್ನೆಚ್ಚರನ ಕಂಚುಕಿಯರಲ್ಲಿ ಮುಖ್ಯನಾದವನ ಹೆಸರೇನು?
8. ಕಂಚುಕಿಯ ಅಧ್ಯಕ್ಷನು ದಾನಿಯೇಲನಿಗೆ ನಾಮಕರಣ ಮಾಡಿದ ಹೆಸರೇನು?
9. ಮೇದ್ಯಯನಾದ ದಾರ್ಯಾವೇಷನ ವಯಸ್ಸು ಎಷ್ಟು?
10. ದಾರ್ಯಾವೇಷನ ತಂದೆಯ ಹೆಸರೇನು?

---

## ಆಶ್ರಮದ ಅವಶ್ಯಕತೆಗಳು

1. 30 ಟೇಬಲ್
2. 60 ಬೆಂಚ್
3. ಟೆಂಪೋ ಟ್ರಾವಲ್ಸ್
4. ಅಕ್ಕಿ, ಸಕ್ಕರೆ, ದವಸಧಾನ್ಯ

ದಾನಿಗಳು : ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ

**9902334941, 08202002781, 09964070654.**

---

## ಬೇಕಾಗಿದ್ದಾರೆ

ಒಂದು ಒಳ್ಳೆಯ ಕ್ರೈಸ್ತ ಸೇವಾ ಸಂಸ್ಥೆಗೆ

**Administrator & Accountant**

ಬೇಕಾಗಿದ್ದಾರೆ. ಒಳ್ಳೆಯ ಸಂಭಾವನೆ ಹಾಗೂ ವಸತಿ ಸೌಕರ್ಯ ಒದಗಿಸಲಾಗುವುದು.

ನಾನು ಯಾವಾಗ ನಿರ್ಬಲನಾಗಿದ್ದೇನೋ ಆವಾಗಲೇ ಬಲವುಳ್ಳವನಾಗಿದ್ದೇನೆ
(2 ಕೊರಿ. 12:10).